ಶ್ರೀ ಎಚ್ ಸಿದ್ಧವೀರಪ್ಪ.—ತಿಳಿಸಿದ್ದೇನೆ. ಮಂತ್ರಿಗಳ ಆಫೀಸಿನಿಂದಲೂ, ಅಧಿಕಾರಿಗಳ ಆಫೀಸಿನಿಂದಲೂ ಅವನ್ನು ಪರಿಶೀಲಿಸುತ್ತಿದ್ದಾರೆಂದು ಜವಾಬು ಬಂದಿರುತ್ತದೆ. ಇದನ್ನು ಹೇಳಲು ಬಹಳ ವ್ಯಸನವಾಗುತ್ತದೆ. ಏನೋ ಜವಾಬು ಬರುತ್ತದೆಂದು ನಿರೀಕ್ಷಣೆ ಮಾಡಿಕೊಂಡರೆ ನಿಮ್ಮ ಾಗದ ಬಂತು. ಅದನ್ನು ಪರಿಶೀಲಿಸುತ್ತಾ ಇದ್ದೇವೆ ಎನ್ನುವ ಪ್ರಿಂಟು ಮಾಡಿ ಇಟ್ಟಿರುವ ಸಾಮಾನ್ಯ ಉತ್ತರವನ್ನು ಕೊಡುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್.—ಚುನಾವಣೆಯಾಗಿ ಎರಡು ತಿಂಗಳು ಮುಗಿಯಿತಲ್ಲಾ.

ಶ್ರೀ ಎಚ್. ಸಿದ್ಧವೀರಪ್ಪ.—ಈ ಕಥೆ 19 ವರ್ಷದಿಂದಲೂ ಇದೆ. ಅವನು ಅದೇ ಊರಿನಲ್ಲೇ ಇನ್ನೂ ಇದ್ದಾನೆ.

[MR. SPEAKER in the Chair]

Non-Official Business

Mysore Sales Tax (Amendment) Bill, 1969.

(Leave to Introduced)

Mr. SPEAKER.—Now, we will take up. Non-Official Business. .e Private Members' Bill will be introduced by Sri Jwalanaiah.

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಮಾನ್ಯ ಸಭಾಧ್ಯಕ್ಷರೇ, ಮೈಸೂರು ಮಾರಾಟ ಗೆಗೆ ಸಂಬಂಧಿಸಿದ ತಿದ್ದುಪಡಿಯು) ವಿಧೇಯಕ, 1969 —ಇದನ್ನು ಮಂಡಿಸಲು ಸಭೆಯ ನುಮತಿಯನ್ನು ಕೋರುತ್ತೇನೆ.

Mr. SPEAKER.—The question is :

"That leave be granted to Sri H. B. Jwalanaiah to introduce the Mysore Sales Tax (Amendment) Bill, 1969.

The motion was adopted.

Mysore Sales Tax (Amendment) Bill, 1969.

(Introduction)

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೈಸೂರು ಮಾರಾಟ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿಯು) ವಿಧೇಯಕ, 1969 — ಇದನ್ನು ಮಂಡಿಸುತ್ತೇನೆ.

Mr. SPEAKER.—The Mysore Sales Tax (Amendment) Bill, 1969 is introduced.

Non-official Resolution *re*: change of name of Mysore State as "Kannada Nadu"

(Debate Continued)

Mr. SPEAKER.—Further discussion on the motion moved by Sri . Srikantaiah on 10th September 1968 on the question of changing the resent name of the Mysore State as 'Kannada Nadu'.

†ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಸಭಾಪತಿಗಳೇ, ಹಿಂದಿನ ಅಧಿವೇಶನದಲ್ಲಿ ಈ ನಿರ್ಣಯದ ಬಗ್ಗೆ ಅಪೂರ್ಣವಾಗಿ ಕೆಲವು ಮಾತುಗಳನ್ನು ಆಡಿ ನಿಲ್ಲಿಸಿದ್ದೆ. ಈ ಅಧಿವೇಶನದಲ್ಲಿ ಇದರ ವಿಷಯವಾಗಿ ಮುಂದುವರಿಯುವುದಕ್ಕೆ ಮುಂಚೆ ಕೆಲವು ಮಾತುಗಳನ್ನು ಆಡಬೇಕಾದ ಸಂದರ್ಭ ಬಂದಿದೆ. ಇದರ ಬಗ್ಗೆ ಪೂರ್ಣ ವಿವರವನ್ನು ಕೊಡುವುದು ಈಗ ಅವಶ್ಯಕವೇ ಎನ್ನತಕ್ಕ ಒಂದು ಸಂಶಯ ನನ್ನನ್ನು ಕಾಡಿಸುತ್ತಿದೆ. ಏಕೆಂದರೆ ಪತ್ರಿಕೆಗಳಲ್ಲಿ ಪ್ರಕಟವಾಗಿರತಕ್ಕ ಸುದ್ದಿಗಳನ್ನು ನೋಡಿದರೆ ಸರ್ಕಾರದವರು ಇದರ ಬಗ್ಗೆ ಈಗಾಗಲೇ ಒಂದು ನಿಲುವನ್ನು ತಾಳಿದ್ದಾರೆ ಎನ್ನುವ ಸಂಶಯ ನನ್ನ ಮನಸ್ಸಿಗೆ ಬರುತ್ತಿದೆ. ಬಹುಶಃ ಆ ವರದಿ ಎಷ್ಟರಮಟ್ಟಿಗೆ ನಿಜವೋ, ನಿಜವಲ್ಲವೋ ಅದನ್ನು ನಾನು ಹೇಳಲಾರೆ. ಯಾವುದೋ ಕೆಲವು ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕೂಡ ನಮ್ಮ ರಾಜ್ಯಕ್ಕೆ ಕರ್ಣಾಟಕ ಎನ್ನುವ ಹೆಸರೇ ಇಡಬೇಕೆಂದು ಹೇಳಿದರು ಎಂದು ಕೆಲವು ಪತ್ರಿಕೆಗಳಲ್ಲಿ ನಾನು ವರದಿಯನ್ನು ಓದಿದೆ. ಇದು ಬಹುಶಃ ಅವರ ವೈಯಕ್ತಿಕ ಅಭಿಪ್ರಾಯವೋ ಅಥವಾ ಸರ್ಕಾರದ ನಿಲುವನ್ನು ಆ ಮಾತುಗಳ ಮೂಲಕ ಸ್ಪಷ್ಟಪಡಿಸಿದರೋ ಎನ್ನುವ ಅಂಶ ಆ ವರದಿಯಲ್ಲಿ ಸ್ಪಷ್ಟವಾಗಿ ಖಚಿತವಾಗಿಲ್ಲ. ಇದು ಅವರ ವೈಯಕ್ತಿಕ ಅಭಿಪ್ರಾಯ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಚರ್ಚೆಗೆ ಮುನ್ನ ಅಥವಾ ಈ ಒಂದು ಮಾನ್ಯ ಸಭೆ ಇದರ ಬಗ್ಗೆ ಒಂದು ನಿಲುವನ್ನು ತಾಳುವುದಕ್ಕೆ ಮುನ್ನ ಅಧಿಕಾರದಲ್ಲಿರುವವರು, ಅದರಲ್ಲೂ ಮುಖ್ಯ ಮಂತ್ರಿಗಳ ಸ್ಥಾನದಲ್ಲಿರುವವರು ಈ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅದರ ತೂಕ ಅನೇಕ ಸದಸ್ಯರ ಮೇಲೆ ಉಂಟಾಗುತ್ತದೆ ಎನ್ನುವ ಸಂಶಯವೂ ಕೂಡ ನನಗೆ ಬರುತ್ತಿದೆ. ಅದು ಹಾಗಿರಲಿ.

ಈ ವಿಷಯವನ್ನು ಮಾತನಾಡುವುದಕ್ಕೂ ಹೆಚ್ಚಾಗಿ ಈ ಒಂದು ವಿರಾಮ ಕಾಲದಲ್ಲಿ ಪತ್ರಿಕೆಗಳಿಗೆ ಓದುವವರು ಬರೆಯುವ ಪತ್ರಗಳ ಮುಖೇನ ನಾವು ಸಭೆಯಲ್ಲಿ ಚರ್ಚಿಸುವುದಕ್ಕಿಂತ ಹೆಚ್ಚಾಗಿ ಅನೇಕ ವಿಷಯಗಳು ವಾಚಕರ ಪತ್ರದಲ್ಲಿ ಮನದಟ್ಟಾಗಿವೆ. ಈ ರಾಜ್ಯದ ಹೆಸರು ಯಾವುದು ಇರಬೇಕು ಎನ್ನುವುದರ ಬಗ್ಗೆ ಬಹಳವಾಗಿ ಮತ್ತು ವಿಪುಲವಾಗಿ ವಾಚಕರ ಪತ್ರಗಳ ಮೂಲಕ ಚರ್ಚೆ ನಡೆದಿದೆ ಮತ್ತು ಕೆಲವು ಪತ್ರಿಕೆಗಳು ಇದರ ಬಗ್ಗೆ ಕೆಲವು ಸಂಪಾದಕೀಯಗಳನ್ನೂ ಬರೆದಿದ್ದಾರೆ. ಇದರ ಬಗ್ಗೆ ಅವರಿಗೆ ನಾನು ಚಿರಋಣಿಯಾಗಿದ್ದೇನೆ. ಈ ಚರ್ಚೆ ಪ್ರಾರಂಭವಾದ ನಂತರ ಅನೇಕರು ಈ ವಿಷಯವನ್ನು ತಿಳಿದು, ಆಳವಾಗಿ ಅಭ್ಯಾಸ ಮಾಡಿ ಮುಖ್ಯವಾಗಿ ಕೆಲವು ಕಾಗದಗಳನ್ನು ವಾಚಕರ ಪತ್ರದಲ್ಲಿ ಬರೆದು ಸಾರ್ವಜನಿಕರ ಮುಂದೆ ಇಟ್ಟಿದ್ದಾರೆ. ಕೆಲವರು ಪರವಾಗಿಯೂ ಸಹ ಬರೆದಿದ್ದಾರೆ, ಕೆಲವರು ವಿರೋಧವಾಗಿಯೂ ಸಹ ಬರೆದಿದ್ದಾರೆ. ಅವರ ಹೆಚ್ಚಿನ ಅಭಿಪ್ರಾಯ 'ಕನ್ನಡ ನಾಡು' ಎಂದು ಇರುವುದೇ ಸೂಕ್ತ ಎಂದು ವಾಚಕರ ಪತ್ರಗಳನ್ನು ಓದುವುದರ ಮೂಲಕ ನನಗೆ ಅರ್ಥವಾಯಿತು. ಅದೂ ಹಾಗಿರಲಿ. ಎಲ್ಲೆಲ್ಲಿ ಅವಶ್ಯಕವೋ ಅಲ್ಲಿ ಕೆಲವು ಮಾನ್ಯ ವಾಚಕರು ಬರೆದಿರುವ ಪತ್ರಗಳ ಬಗ್ಗೆ ಅಲ್ಲಲ್ಲಿ ರೆಫರೆನ್ಸ್ ಕೊಡಬೇಕಾಗುತ್ತದೆ. ಅಂಥ ಸಮಯ ಸಂದರ್ಭ ಬಂದಾಗ ಆ ಅವಕಾಶವನ್ನು ಉಪಯೋಗಿಸಿಕೊಂಡು ಅವನ್ನು ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಹಿಂದೆ ಹೇಳಿದುದನ್ನು ಜ್ಞಾಪಿಸಿಕೊಳ್ಳುವುದಾದರೆ ಒಟ್ಟು ದೇಶದಲ್ಲಿ, ಆ ರಾಜ್ಯದ ಹೆಸರನ್ನು ಆ ದೇಶದ ಜನರನ್ನು ಕರೆಯುವ ಹೆಸರಿನಿಂದಾಗಲೀ ಅಥವಾ ಆ ಭಾಗದ ಅಥವಾ ಪ್ರದೇಶದ ಜನರು ಮಾತನಾಡತಕ್ಕ ಭಾಷೆಯಿಂದಾಗಲೀ ಕರೆಯುವುದಕ್ಕೇ ಬಹಳಮಟ್ಟಿಗೆ ಪ್ರೋತ್ಸಾಹ ಸಿಕ್ಕುತ್ತಿದೆ. ಹೋದ ಬಾರಿ ನಾನು ಉದಾಹರಣೆಯನ್ನು ಕೊಟ್ಟ ಹಾಗೆ ಯಾವ ಪ್ರದೇಶದಲ್ಲಿ ತಮಿಳು ಭಾಷೆ ಮಾತೃಭಾಷೆಯನ್ನಾಗಿ ಉಳ್ಳತಕ್ಕ ಜನರು ತಮಿಳರು ಎಂದು ಕರೆದುಕೊಂಡರೋ ಹಾಗೆಯೇ ಆ ದೇಶವನ್ನು ತಮಿಳುನಾಡು ಎಂದು ಅವರು ಕರೆದರು. ಇದಕ್ಕೆ ಕೇಂದ್ರ ಸಂಸತ್ತಿನಿಂದ ಅನುಮತಿ ದೊರೆತು ಆ ರಾಜ್ಯವನ್ನು ಮದ್ರಾಸ್ ರಾಜ್ಯ ಎಂಬುದಕ್ಕೆ ಬದಲಾಗಿ ತಮಿಳು ನಾಡು ಎನ್ನುವ ಹೆಸರಿನಿಂದ ಕರೆಯುವುದಕ್ಕೆ ಆರಂಭವಾಗಿದೆ. ಈ ಒಂದು ಚಳುವಳಿ ಎನಿದೆ, ಆ ಶಬ್ದವನ್ನು ಉಪಯೋಗಿಸುವುದಾದರೆ ಈ ಚಳುವಳಿ ಎಲ್ಲ ಪ್ರದೇಶಗಳಿಗೂ ಕೂಡ ಈಗ ಹಬ್ಬುತ್ತಿದೆ. ಈ ಚಳುವಳಿಯ ಒಂದು ಉತ್ಸಾಹದಿಂದಲೇ, ಒಂದು ಸ್ಫೂರ್ತಿಯಿಂದಲೇ ನಾನೂ ಸಹ ನಮ್ಮ ದೇಶವನ್ನು ಕೂಡ ನಮ್ಮ ದೇಶದ ಜನರು ಯಾವ ಭಾಷೆಯನ್ನು ಮಾತನಾಡುತ್ತಿದ್ದಾರೆಯೋ ಅಥವಾ ನಮ್ಮ ದೇಶದ ಜನರನ್ನು ಸಾಮಾನ್ಯವಾಗಿ ಕನ್ನಡಿಗರು ಎಂಬತಕ್ಕ ಯಾವ ಶಬ್ದದಿಂದ ಎಲ್ಲರೂ ಕರೆಯುವುದಕ್ಕೆ ಇಚ್ಛೆ ಪಡುತ್ತಾರೆಯೋ ಅದೇ ಶಬ್ದದ ಮೂಲಕ ಈ ರಾಜ್ಯಕ್ಕೆ ನಾಮಕರಣ ಮಾಡುವುದು ಉತ್ತಮ ಎನ್ನುವ ಆಲೋಚನೆಯಿಂದ ಈ ನಿರ್ಣಯವನ್ನು ತಂದಿದ್ದೇನೆ. ಇದರ ಬಗ್ಗೆ ವಿಪುಲವಾಗಿ ಈ ರಾಜ್ಯದ ಹಿಂದಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ಎಲ್ಲೆಲ್ಲಿ ಅತ್ಯಾವಶ್ಯಕವೋ ಅಲ್ಲಲ್ಲಿ ಓದಿ ಹೇಳಿ ಮುಂದೆ ಬಂದೆ. ಈಗ ಈ ದೇಶಾದ್ಯಂತ ಪ್ರತಿಯೊಂದು

(ಶ್ರೀ ಎರ್. ಶ್ರೀಕಂಠಯ್ಯ)

ರಾಜ್ಯದ ಹೆಸರನ್ನು ಆ ಪ್ರದೇಶದ ಜನರು ಮಾತನಾಡತಕ್ಕ ಭಾಷೆಯಿಂದಾಗಲೀ ಅಥವಾ ಆ ಮಾತೃಭಾಷೆಯನ್ನುಳ್ಳ ಆ ಜನರ ಹೆಸರಿನಿಂದಾಗಲೀ ಕರೆಯುವುದು ವಾಡಿಕೆಯಾಗಿರುವಾಗ ಈ ರಾಜ್ಯಕ್ಕೆ 'ಕನ್ನಡ ನಾಡು' ಬಹಳ ಸೂಕ್ತವಾದ ಹೆಸರು ಎಂದು ಪುನಃ ಒತ್ತಿ ಹೇಳಬೇಕಾಗಿದೆ.

4-00 P.M.

ಈ ಸಂದರ್ಭದಲ್ಲಿ ಕೆಲವರು ಇದು ಅಷ್ಟು ಸೂಕ್ತವಾದ ಹೆಸರಾಗಿ ಕಾಣುವುದಿಲ್ಲ, ಕರ್ಣಾಟಕ ಎಂಬ ಹೆಸರು ಬರಬೇಕು, ಕರ್ನಾಟಕ ಎಂಬ ಹೆಸರಿಡಬೇಕು ಎಂದು ವಾದ ಮಂಡಿಸಿದ್ದಾರೆ. ಈ ಒಂದು ವಾದಕ್ಕೆ ಪುಷ್ಟಿ ಕೊಡುವಹಾಗೆ ಕೆಲವರು 3-4 ಕಾರಣಗಳನ್ನು ಆಗಾಗ್ಗೆ ಮುಂದೊಡ್ಡುತ್ತಿದ್ದಾರೆ. ಆ ಕಾರಣಗಳನ್ನು ಕೂಲಂಕಷವಾಗಿ ವಿಮರ್ಶೆಮಾಡಿ ನಾನು ಉತ್ತರವನ್ನು ಸಹ ಕೊಡಬೇಕಾಗಿದೆ. ಈ ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರು ಸೂಕ್ತವಲ್ಲ ಎಂದು ಹೇಳಿ ಆ ಸಲಹೆಯನ್ನು ನಾನು ವಿರೋಧಿಸಬೇಕಾಗಿದೆ. ಕರ್ಣಾಟಕ ಎಂದು ಕೆಲವರೂ ಕರ್ನಾಟಕ ಎಂದು ಮತ್ತೆ ಕೆಲವರೂ ಈ ರಾಜ್ಯಕ್ಕೆ ನಾಮಕರಣ ಮಾಡಬೇಕೆಂದು ಹೇಳುತ್ತಿದ್ದಾರೆ, 'ನ' ಮತ್ತು 'ಣ' ಎಂಬ ಎರಡಕ್ಷರಗಳ ಬಗ್ಗೆ ಯುದ್ಧ ಈಗಲೂ ನಡೆಯುತ್ತಿದೆ. 30 ವರ್ಷಗಳಿಂದ ಯುದ್ಧ ನಡೆದರೂ ಯಾರೂ ಗೆದ್ದಿಲ್ಲ. ಕನ್ನಡನಾಡು ಎಂದು ಕರೆದರೆ ಈ ಗಲಾಟೆಗೆ ಅವಕಾಶವಾಗುವುದಿಲ್ಲ. ಈ ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಕೂಡ ಬಹಳ ವರ್ಷಗಳ ಹಿಂದೆಯೇ ಒಪ್ಪಿದೆ. ಕರ್ಣಾಟಕ ಪ್ರೊವಿನ್ಷಿಯಲ್ ಕಾಂಗ್ರೆಸ್ ಕಮಿಟಿಯು ರಾಷ್ಟ್ರೀಯ ಚಳವಳಿ ಕಾಲದಲ್ಲಿ ಆ ಹೆಸರು ಬಂದಿದೆ ಎಂದು ಉದಾಹರಣೆ ಕೊಡುತ್ತಾರೆ. ಇನ್ನು ಕೆಲವರು ಅಂದರೆ ರಾಜಕೀಯ ಪಕ್ಷಗಳವರು ಸಹ ಕರ್ಣಾಟಕ ಪಿ. ಎಸ್. ಪಿ., ಕರ್ಣಾಟಕ ಎಸ್. ಎಸ್. ಪಿ., ಕರ್ಣಾಟಕ ಕಮ್ಯೂನಿಸ್ಟ್ ಪಕ್ಷ ಎಂದು ಹೇಳಿಕೊಂಡಿದ್ದಾರೆ. ಹೀಗೆ ಅಖಿಲ ಭಾರತ ರಾಜಕೀಯ ಪಕ್ಷಗಳು ಮತ್ತು ಅಖಿಲಭಾರತ ಕಾಂಗ್ರೆಸ್ ಸಹ ಕರ್ಣಾಟಕ ಎಂಬ ಹೆಸರನ್ನು ಒಪ್ಪಿರುವಾಗ ನಾವೇಕೆ ವಿರೋಧಿಸಬೇಕು ? ಅದು ಬಹಳ ಮೇಲ್ಮಟ್ಟದವರಿಂದ ಅನುಮೋದಿಸಲ್ಪಟ್ಟಿದೆ ಎಂಬ ವಾದ ಕೆಲವು ಕಡೆ ಇದೆ. ಅದಕ್ಕೆ ನಾನು ಉತ್ತರ ಕೊಡುವುದಿಷ್ಟೆ: ಕೆಲವು ಐತಿಹಾಸಿಕ ಕಾರಣಗಳಿವೆ. ಮೊದಲನೆಯ ಕಾರಣವೇನೆಂದರೆ, ನನಗೆ ಗೊತ್ತಿರುವಹಾಗೆ ರಾಷ್ಟ್ರೀಯ ಚಳವಳಿ ನಡೆದಾಗ ಎಲ್ಲೆಲ್ಲಿ ಕನ್ನಡ ಮಾತನಾಡುತ್ತಿದ್ದರೋ ಆ ಭಾಗದ ಜನರೆಲ್ಲಾ ಒಂದೇ ರಾಜ್ಯದ ಆಶ್ರಯದಲ್ಲಿರಲಿಲ್ಲ. ಕೆಲವು ಭಾಗದ ಜನರು ಮೈಸೂರು ರಾಜ್ಯದ ಆಶ್ರಯದಲ್ಲಿ, ಇನ್ನು ಕೆಲವರು ಮದ್ರಾಸು ರಾಜ್ಯದ ಆಶ್ರಯದಲ್ಲಿ, ಕೆಲವರು ಮುಂಬಯಿ ರಾಜ್ಯದ ಆಶ್ರಯದಲ್ಲಿ, ಮತ್ತೆ ಕೆಲವರು ಹೈದರಾಬಾದು ರಾಜ್ಯದ ಆಶ್ರಯದಲ್ಲಿ ಇದ್ದರು. ಅದರಲ್ಲಿ ಮೈಸೂರಿನಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಾಗಿತ್ತು. ರಾಷ್ಟ್ರೀಯ ಚಳವಳಿ ಆರಂಭವಾದಾಗ, ಭಾರತವು ಸ್ವತಂತ್ರ ರಾಷ್ಟ್ರವಾದ ಮೇಲೆ ಭಾಷಾ ಆಧಾರದಮೇಲೆ ರಾಜ್ಯ ವಿಭಜನೆಯಾಗಬೇಕು ಎಂಬುದನ್ನು ಕಾಂಗ್ರೆಸ್ ಅನುಮೋದಿಸಿತು. ರಾಷ್ಟ್ರೀಯ ಚಳವಳಿಯಾದಮೇಲೆ ಬೇರೆ ಬೇರೆ ಭಾಷಾವಾರು ಪ್ರಾಂತಗಳಾದುವು. ಕರ್ಣಾಟಕ ಕಾಂಗ್ರೆಸ್ ಕಮಿಟಿಯು ಒಂದು ಹೆಸರಿನ್ನಿಟ್ಟಿತು. ಇದರಲ್ಲಿ ಒಂದು ವಿಷಯ. ರಾಷ್ಟ್ರೀಯ ಚಳವಳಿ ಮೈಸೂರು ರಾಜ್ಯಕ್ಕೆ ಅನ್ವಯವಾಗುವುದಿಲ್ಲ. ಮೈಸೂರಿನ ಪ್ರಜೆಗಳು ಅವರು ಸ್ವತಂತ್ರರಾಗಬೇಕೆಂದು ಇಷ್ಟಪಟ್ಟರೂ ಅವರು ಪ್ರತ್ಯೇಕ ಚಳವಳಿ ಮಾಡಲಿಲ್ಲ. ಎಲ್ಲಿ ಅವಶ್ಯಕತೆಯಿದೆಯೋ ಅಲ್ಲಿ ಸಲಹೆ ಕೊಡುತ್ತೇವೆಂದು ರಾಷ್ಟ್ರೀಯ ಕಾಂಗ್ರೆಸ್ ಮೈಸೂರನ್ನು ಬಿಟ್ಟಿತು. ಈ ಕಾರಣದಿಂದ ರಾಷ್ಟ್ರೀಯ ಚಳವಳಿ ಆದಮೇಲೆ ಮೈಸೂರು ಕಾಂಗ್ರೆಸ್ ಕಮಿಟಿಯು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಾಗಿ ಒಂದು ಪ್ರತ್ಯೇಕ ಸಂಸ್ಥೆಯಾಯಿತು. ಇದನ್ನು ಒತ್ತಿ ಹೇಳುತ್ತೇನೆ. ರಾಷ್ಟ್ರೀಯ ಚಳವಳಿ ನಡೆದಾಗ ಮೈಸೂರು ರಾಜ್ಯದಲ್ಲಿ ಪ್ರತ್ಯೇಕ ಚಳವಳಿ ಆರಂಭವಾಯಿತು. ಈ ಒಂದು ಹಿನ್ನೆಲೆಯಿರುವಾಗ ವಿಭಜನೆ ಮಾಡುವುದಕ್ಕೆ ಕರ್ಣಾಟಕ ಕಾಂಗ್ರೆಸ್ ಕಮಿಟಿಗೆ ರೆಫರ್ ಮಾಡಿದರೇ ಹೊರತು ಕರ್ಣಾಟಕ ಕಾಂಗ್ರೆಸ್ ಕಮಿಟಿಗೂ ಮೈಸೂರು ರಾಜ್ಯಕ್ಕೂ ಯಾವ ವಿಧವಾದ ಸಂಬಂಧವೂ ಇಲ್ಲ. ಈ ಕರ್ಣಾಟಕ ಕಾಂಗ್ರೆಸ್ ಕಮಿಟಿಗೂ ಮೈಸೂರು ರಾಜ್ಯಕ್ಕೂ ಯಾವ ವಿಧವಾದ ಸಂಬಂಧವೂ ಇರಲಿಲ್ಲ. ಇದೇ ರೀತಿಯಲ್ಲಿ ಅಖಿಲಭಾರತದ ಪಕ್ಷಗಳು ತಮ್ಮ ಪಕ್ಷಗಳನ್ನು ಸ್ಥಾಪಿಸುವಾಗ ಮೈಸೂರು ರಾಜ್ಯವನ್ನು ಬಿಟ್ಟುವು. ಈ ಒಂದು ರೂಢಿಯಿಂದ ಅಖಿಲಭಾರತದಲ್ಲಿ ಪಕ್ಷಗಳನ್ನು ಸ್ಥಾಪಿಸುವಾಗ ಕರ್ಣಾಟಕ ಪ್ರಜಾ ಸೋಷಿಯಲಿಸ್ಟ್ ಪಕ್ಷ, ಕರ್ಣಾಟಕ ಕಮ್ಯೂನಿಸ್ಟ್ ಪಕ್ಷ ಎಂದು ಕರೆದುಕೊಂಡು ಕರ್ಣಾಟಕ ಎಂದು ಪಕ್ಷದ ಹೆಸರಿನ ಮುಂದೆ ಸೇರಿಸಿಕೊಳ್ಳುವ

ಸಂಪ್ರದಾಯವನ್ನು ಮುಂದುವರಿಸಿದರು. ಮುಖ್ಯವಾದ ಅಂಶ ನಾನು ಗಮನಿಸಬೇಕಾದ್ದು ಎ.ಐ.ಸಿ.ಸಿ. ಆಗಲಿ ಅಥವಾ ಇತರ ರಾಜಕೀಯ ಪಕ್ಷಗಳಾಗಲಿ ಕರ್ಣಾಟಕ ಎಂಬ ಹೆಸರನ್ನು ಹೇಳುವಾಗ ಮೈಸೂರು ರಾಜ್ಯಕ್ಕೆ ಒಳಪಟ್ಟ ಕೆಲವು ಪ್ರದೇಶಗಳನ್ನು ಆ ಹೆಸರಿನ ವ್ಯಾಪ್ತಿಗೆ ತರಲಿಲ್ಲ. ನಮ್ಮ ರಾಜ್ಯಕ್ಕೆ ಮೈಸೂರು ರಾಜ್ಯ ಎಂಬ ಹೆಸರಿತ್ತು. ಕರ್ಣಾಟಕ ಎಂಬ ಹೆಸರಿರಲಿಲ್ಲ. ಒಂದು ಐತಿಹಾಸಿಕ ಕಾರಣದಿಂದಾಗಿ ಕರ್ಣಾಟಕ ಎಂಬ ಹೆಸರು ಸ್ವಲ್ಪಮಟ್ಟಿಗೆ ಪ್ರಚಾರಕ್ಕೆ ಬಂತೇ ಎಂಬ ವಿಚಾರದಲ್ಲಿ ಸಂಶಯವಿದೆ. ಕರ್ಣಾಟಕ ಎಂದು ನಾಮಕರಣ ಮಾಡಿದವರು ಯಾರು? ಇದರ ಬಗ್ಗೆ ನಾವು ಕೂಲಂಕಷವಾಗಿ ಇತಿಹಾಸವನ್ನು ನೋಡಿದರೆ ಬಹಳ ವರ್ಷಗಳ ಹಿಂದೆ ಕರ್ಣಾಟಕ ಎಂಬ ಮೂಲ ಶಬ್ದವಿತ್ತು. ಅದರಿಂದ ಕರ್ಣಾಟಕ ಎಂಬ ಶಬ್ದ ಉತ್ಪನ್ನವಾಯಿತು. ಈ ಮೂಲಶಬ್ದ ಕರ್ಣಾಟಕವಾಗಿ ಕನ್ನಡ ಎಂಬ ಶಬ್ದ ಬಂದಿದೆ, ಇದಕ್ಕೆ ಕಿಟೆಲ್ ಡಿಕ್ಷನರಿ ಅಥಾರಿಟಿ. ಅದನ್ನು ರೆಫರ್ ಮಾಡಿದರೆ ಗೊತ್ತಾಗುವುದು. ಕರ್ಣಾಟಕ ಎಂಬುದು ಮೂಲ ಶಬ್ದ.

†ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಪಟ್ಟಣ).—ಒಂದು ಕ್ಲಾರಿಫಿಕೇಸನ್ ಬೇಕಾಗಿದೆ. ಈ ಮೈಸೂರನ್ನು ಕನ್ನಡನಾಡು ಎಂದು ಕರೆಯಬೇಕು, ಕರ್ಣಾಟಕ ಎನ್ನಬಾರದು ಎಂದು ಹೇಳಿ ಅದಕ್ಕೆ ಐತಿಹಾಸಿಕ, ಚಾರಿತ್ರಿಕ ಕಾರಣ ಇತ್ಯಾದಿಗಳನ್ನು ಕೊಡುತ್ತಿದ್ದಾರೆ. ಆದರೆ ಸಾಮಾನ್ಯ ಜನರಿಗೆ ಯಾವುದು ಮುಖ್ಯ ಎಂಬುದನ್ನು ತಿಳಿಸಬೇಕೆಂದು ಅರಿಕೆಮಾಡುತ್ತಿದ್ದೇನೆ. ಮೈಸೂರಿಗೆ ಕನ್ನಡನಾಡು ಅಥವಾ ಕರ್ಣಾಟಕ ಎಂದು ಹೆಸರಿಡುವುದರಿಂದ ಸಾಮಾನ್ಯ ಜನರಿಗೆ ದೊರೆಯುವ ಪ್ರತಿಫಲವೇನು ಎಂಬುದನ್ನು ವಿಚಾರ ಮಾಡಬೇಕು. ಐತಿಹಾಸಿಕ ಮತ್ತು ಚಾರಿತ್ರಿಕ ಕಾರಣ ಕೊಡುತ್ತಾ ಹೋದರೆ ಜನರಿಗೆ ಹೊಟ್ಟೆ ತುಂಬುವುದಿಲ್ಲ. ಮೈಸೂರು ಎಂಬ ಹೆಸರೇ ಇದ್ದರೆ ಅನಾನುಕೂಲವೇನು, ಸಾಮಾನ್ಯ ಜನರಿಗೆ ತೊಂದರೆಯೇನು? ಹೆಸರು ಬದಲಾಯಿಸಿದರೆ ಲಂಚ ಕಡಮೆಯಾಗುವುದೇ? ಬೇರೆ ಏನಾದರೂ ಅನುಕೂಲವಾಗುವುದೇ? ಕನ್ನಡನಾಡು, ಕರ್ಣಾಟಕ, ಮೈಸೂರು ಎಂಬ 3 ಹೆಸರುಗಳಲ್ಲಿ ಯಾವುದನ್ನಿಟ್ಟರೆ ಜನರು ಸತ್ಯದಿಂದ ಕೆಲಸ ಮಾಡುತ್ತಾರೆ, ಲಂಚಗುಳಿತನ ಕಡಮೆಯಾಗುವುದು, ಕೃಷಿ ಉತ್ಪತ್ತಿ ಹೆಚ್ಚುವುದು, ಕೈಗಾರಿಕೆ ಬೆಳೆಯುವುದು, ಉತ್ಪತ್ತಿ ಸರಿಯಾಗಿ ಹಂಚಿಕೆಯಾಗುವುದು, ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದು ಎಂಬುದನ್ನು ಮುಖ್ಯವಾಗಿ ಹೇಳಬೇಕು. ಮುಖ್ಯವಾಗಿ ಸಾಮಾನ್ಯ ಜನತೆಗೆ ಬೇಕಾಗಿರುವುದು ಇದು. ನಾವು ನೀವು ಹೇಳುವುದನ್ನು ಒಪ್ಪುವುದಕ್ಕೆ ಸಿದ್ಧವಾಗಿದ್ದೇವೆ, ಯಾವ ಹೆಸರಿನಿಂದ ಬಹಳ ಅನುಕೂಲ ಎಂಬುದನ್ನು ಹೇಳಿದರೆ ನಾವು ಅದಕ್ಕೆ ಓಟು ಮಾಡುತ್ತೇವೆ.

ಸಾಮಾನ್ಯವಾಗಿ ಜನರ ದೃಷ್ಟಿ, ಐತಿಹಾಸಿಕ ಕಾರಣಗಳು ಏನಾದರೂ ಇರಲಿ ಚಾರಿತ್ರಿಕ ಕಾರಣಗಳು ಏನೇ ಇರಲಿ ಜನಸಾಮಾನ್ಯರ ಜನಜೀವನ ಉತ್ತಮವಾಗಿ ಸುಖವಾಗುವುದಾದರೆ ಅದರ ಹಿನ್ನೆಲೆಯಲ್ಲಿ ಮಾಡುವುದು ಒಳ್ಳೆಯದು. ಆದ್ದರಿಂದ ತಮ್ಮಲ್ಲಿ ಅರಿಕೆ ಮಾಡುವುದೇನೆಂದರೆ ಕರ್ಣಾಟಕ ಅನ್ನುವುದು ಇದ್ದರೆ ಕೃಷ್ಣಾ ಪ್ರಾಜೆಕ್ಟು ಆಗುತ್ತದೆಯೇ? ಅಥವಾ ಕನ್ನಡ ನಾಡು ಅಂತ ಆದರೆ ಅದರಿಂದ ಕಾವೇರಿ ಕೃಷ್ಣಾ ಪ್ರಾಜೆಕ್ಟುಗಳು ಆಗಿ ಧನಧಾನ್ಯ ಸಮೃದ್ಧಿಯಾಗಿ ಒದಗುತ್ತದೆಯೇ? ಆ ರೀತಿ ಆಗುವುದಾದರೆ ತಾವು ಹೇಳುವುದನ್ನು ಯಾವುದು ಬೇಕಾದರೂ ಒಪ್ಪಿಕೊಳ್ಳೋಣ. ಜನಸಾಮಾನ್ಯರ ದೃಷ್ಟಿಯಿಂದ ಇದನ್ನು ಮಾಡಬೇಕೇ ಹೊರತು ಕೇವಲ ಒಂದು ಭ್ರಾಂತಿಗಾಗಿ ಈ ಒಂದು ಹೆಸರಿನ ಬಗ್ಗೆ ಹೊಡೆದಾಡಬೇಕಾಗಿಲ್ಲ. ಈ ಬಗ್ಗೆ ಸಾಕಾದಷ್ಟು ಮೆಟೀರಿಯಲ್ಸ್ ನಮಗೆ ತಾವು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

† ಶ್ರೀ ಬಿ. ಪಿ. ಗಂಗಾಧರ್ (ತುಮಕೂರು). —ಶ್ರೀಮಾನ್ ಚನ್ನಬಸಪ್ಪನವರ ದೃಷ್ಟಿಕೋಣ ಒಂದು ರೀತಿಯಲ್ಲಿ ಇದೆ. ಹೆಸರಿನಲ್ಲೇನಿದೆ ಎಂದು ಅನ್ನುವುದು ಅಷ್ಟು ಸುಲಭವಲ್ಲ. ನನ್ನನ್ನು ಗಂಗಾಧರ ಅಂತ ಕರೆಯಬೇಕಾದರೆ, ಅವರನ್ನು ಚನ್ನಬಸಪ್ಪ ಅಂತ ಕರೆಯಬೇಕಾದರೆ ತಂದೆ ತಾಯಿಗಳು ಏನೋ ಒಂದು ಅಭಿಪ್ರಾಯ ಇಟ್ಟುಕೊಂಡಿರುತ್ತಾರೆ. ಅದನ್ನು ಬಿಟ್ಟು ಕಲ್ಲು, ಬಂಡೆ ಅಂತ ಕರೆಯಬಹುದಾಗಿತ್ತಲ್ಲ? ಮಣ್ಣು ಮರ ಅಂತ ಏಕೆ ಕರೆಯಲಿಲ್ಲ! ಬಹುಶಃ ಅವರು ಹೇಳಿರುವ ರೀತಿಯಲ್ಲಿ ಇದನ್ನು ಅವರು ಅಷ್ಟು ಸೀರಿಯಸ್ ಆಗಿ ತೆಗೆದುಕೊಂಡಿಲ್ಲ ಎಂದು ಅನಿಸುತ್ತದೆ. ಅವರು ಬೇಕಾದಷ್ಟು ಮಾಹಿತಿ ತಿಳಿದುಕೊಂಡಿದ್ದಾರೆ, ಇದನ್ನು ಅಧ್ಯಯನ ಮಾಡಿದ್ದಾರೆ ಆ ಬಗ್ಗೆ ನಾನು ಏನೂ ಹೇಳುತ್ತಿಲ್ಲ. ತಾವು ಅದಷ್ಟು ಸಂಕ್ಷೇಪವಾಗಿ ಹೇಳಿ ಎಂದು ಹೇಳಿದಿರಿ, ನಿಮ್ಮ ಉದ್ದೇಶ ಎಲ್ಲರಿಗೂ ಅವಕಾಶ ಸಿಕ್ಕಲಿ ಎಂಬುದಾಗಿದೆ, ಆದರೆ ಈ ರಾಜ್ಯದ ಹೆಸರನ್ನು ಪುನರ್‌ನಾಮಕರಣ ಮಾಡಬೇಕೆಂದು ಹೇಳುತ್ತಾ ಇರತಕ್ಕ ಈ ವಿಷಯ ಬಹಳ ಮುಖ್ಯವಾದದ್ದು, ಗಹನವಾದದ್ದು ಎಂದು ಮಾತ್ರ ಹೇಳಬೇಕಾಗಿಲ್ಲ, ಇಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರಲ್ಲಿ ಏನು ಮಾಹಿತಿ ಇದೆ ಅದನ್ನು ಪೂರ್ಣವಾಗಿ ಸಭೆಯ ಮುಂದಿಡಲು ಅವರಿಗೆ ಅವಕಾಶ ಕೊಡಬೇಕು. ಅವರು ಹೆಚ್ಚು

(ಶ್ರೀ ಬಿ. ಪಿ. ಗಂಗಾಧರ್)

ವೇಳೆ ತೆಗೆದುಕೊಂಡರೂ ಚಿಂತೆ ಇಲ್ಲ. ಬೇಕಾದರೆ ಇನ್ನೂ ಒಂದು ದಿವಸ ಇದಕ್ಕೆ ಅವಕಾಶ ಕೊಡಬಹುದು, ಸದಸ್ಯರೆಲ್ಲರಿಗೂ ಮನದಟ್ಟಾಗುವ ರೀತಿಯಲ್ಲಿ ಹೇಳಲು ವಿಷಯಗಳನ್ನು ಸಭೆಯ ಮುಂದೆ ಇಡಲು ಅವಕಾಶ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಶ್ರೀ ಎರ್. ಶ್ರೀಕಂಠಯ್ಯ.—ಮಾನ್ಯ ಚನ್ನಬಸಪ್ಪನವರ ವಾಕ್‌ಸರಣಿಯನ್ನು ಕೇಳಿದೆ. ನಾನು ಕೈಗಾರಿಕೆಗಳು ಆಗುವುದು ಬೇಡ ಅಂತ ಹೇಳಲಿಲ್ಲ, ಕೃಷ್ಣಾ ಪ್ರಾಜೆಕ್ಟ್ ಆಗುವುದು ಬೇಡ ಎಂದು ಹೇಳಲಿಲ್ಲ, ದೇಶದಲ್ಲಿ ನಿರುದ್ಯೋಗ ಇರಬೇಕೆಂದು ಹೇಳಲಿಲ್ಲ, ಅಂತಹ ಎಲ್ಲ ಸಕಲ ಸಂಪತ್ತು, ಸಾಧ್ಯತೆಗಳೂ ಈ ದೇಶದ ಜನತೆಗೆ ಒದಗಲಿ ಎಂದು ನಾನು ಹೇಳುತ್ತೇನೆ. ಚನ್ನಬಸಪ್ಪನವರ ವಾದದಲ್ಲಿ ಒಂದು ಅಂಶ ಇದೆ. ಜನ ಯಾವುದು ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೋ ಅದಕ್ಕೆ ಮತ ಕೊಡುತ್ತೇನೆ ಎಂದು ಹೇಳಿದರು, ಕೇವಲ ಹೆಸರಿನಿಂದ ಭ್ರಾಂತಿಪಡದೆ ಯಾವ ಹೆಸರೇ ಇರಲಿ ಮುಖ್ಯವಾಗಿ ನಮಗೆ ಸುಖ ಒದಗುತ್ತದೆ, ನಮ್ಮ ಕಾರ್ಯಕ್ರಮಗಳು ನೆರವೇರುತ್ತವೆ ಅದನ್ನು ಎದುರು ನೋಡುವುದು ಸ್ವಾಭಾವಿಕ, ನಿಜವಾದ ಮಾತು. ನಮಗೆ ಜೀವನದಲ್ಲಿ ಕೇವಲ ಹಣ ಒಂದೇ ಮುಖ್ಯವಲ್ಲ, ಬೇಕಾದಷ್ಟು ನಾವು ಸಂಪಾದನೆ ಮಾಡುತ್ತೇವೆ, ಕಳೆಯುತ್ತೇವೆ, ಮನೆಗಳನ್ನು ಕಟ್ಟುತ್ತೇವೆ, ಅಷ್ಟಾದರೂ ಕೂಡ ಜೀವನದಲ್ಲಿ ಅನೇಕ ಭ್ರಾಂತಿಗಳು ಇರುತ್ತವೆ, ಬಹುಶಃ ಚನ್ನಬಸಪ್ಪನವರಿಗೂ ಕೂಡ ಕೆಲವು ಭ್ರಾಂತಿಗಳು ಇವೆ. ಆ ಭ್ರಾಂತಿಗಳು ಯಾವುವು ಎಂದರೆ ಸಾಮಾನ್ಯವಾಗಿ ಒಂದು ಮಗು ಹುಟ್ಟಿದರೆ ಅದಕ್ಕೆ ಸಾಧ್ಯವಾದಮಟ್ಟಿಗೂ ಒಂದು ಒಳ್ಳೆಯ ಹೆಸರು ಇಡುವುದು--ಶ್ರೀಮಾನ್ ಚನ್ನಬಸಪ್ಪನವರೂ ಕೂಡ—ಒಂದು ಒಳ್ಳೆಯ ದಿನ ನೋಡಿ, ಪುರೋಹಿತರನ್ನು ಕರೆದುಕೊಂಡು ಬಂದು ಶುಭದಿವಸದಲ್ಲಿ ಅದಕ್ಕೆ ಒಂದು ಒಳ್ಳೆಯ ನಾಮಕರಣ ಮಾಡುತ್ತೇವೆ. ಇದು ಭ್ರಾಂತಿಯಾದರೂ ಒಳ್ಳೆಯದಾಗುತ್ತದೆ ಎಂಬ ಭಾವನೆ ಇದೆ. ನಾವು ನಮ್ಮ ಮುನ್ನಡೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಯಾವ ಪ್ರಕಾರ ಗಮನ ಕೊಡುತ್ತಾ ಇದ್ದೇವೆಯೋ ಅದೇ ರೀತಿಯಲ್ಲಿ ನಮ್ಮ ವಿದ್ಯಾಭ್ಯಾಸದ ಮುನ್ನಡೆಯಲ್ಲಿ ಒಂದು ಭಾವಾತ್ಮಕ ದೃಷ್ಟಿಯನ್ನೂ ಕೂಡ ಒಪ್ಪಿಕೊಳ್ಳಲೇಬೇಕಾಗುತ್ತದೆ. ಅಂಥಾ ಒಂದು ದೃಷ್ಟಿಯಿಂದ ಈ ಒಂದು ಹೆಸರು ಬಹಳ ಸೂಕ್ತ. ಅದಕ್ಕೆ ಕಾರಣಗಳೇನು ಎಂಬುದನ್ನು ನಾನೀಗ ಒತ್ತಿ ಹೇಳುತ್ತಿದ್ದೇನೆ. ಹಿಂದೆ ಅನೇಕ ಕಾರಣಗಳಿಂದ ಒಂದೇ ಕಡೆಇದ್ದು ಕನ್ನಡವನ್ನು ಮಾತನಾಡುತ್ತಿದ್ದಂಥ ಜನರು ಹರಿದು ಹಂಚಿಹೋಗಿದ್ದರು. ಹಾಗೆ ಅವರು ಹರಿದು ಹಂಚಿಹೋದಕಾಲದಿಂದಲೂ ಅವರೆಲ್ಲರೂ ಮತ್ತೆ ಒಂದುಕಡೆ ಸೇರಲೇಬೇಕೆಂಬ ಹಂಬಲ ಅವರಲ್ಲಿತ್ತು. ಆದರೆ ಅನೇಕ ಕಾರಣಾಂತರಗಳಿಂದ ಅದು ಸಾಧ್ಯವಾಗಿರಲಿಲ್ಲ. ಹಾಗೆ ಹರಿದು ಹಂಚಿಹೋಗಿದ್ದ ಕನ್ನಡಿಗರೆಲ್ಲರೂ ಮತ್ತೆ ಒಂದು ಕಡೆ ಸೇರಬೇಕೆಂಬ ಒಂದು ಹಂಬಲ ವಿದ್ಯಾವಂತವರ್ಗದಲ್ಲೂ, ಪ್ರಾಜ್ಞರಲ್ಲೂ ಮತ್ತು ಅನೇಕ ಕವಿಪುಂಗವರಲ್ಲೂ—ಸಾಹಿತಿಗಳಲ್ಲೂ ಸದಾ ಸುಳಿದಾಡುತ್ತಲೇ ಇತ್ತು. ಅನೇಕ ಕವಿಗಳು ಸಾಹಿತಿಗಳು ಈ ಬಗ್ಗೆ ಅನೇಕ ಕವನಗಳನ್ನು ಬರೆದು ಪದ್ಯರೂಪದಲ್ಲೂ—ಗದ್ಯರೂಪದಲ್ಲೂ ಹಾಡುತ್ತಲೇ ಇದ್ದರು. ಆ ಒಂದುಗೂಡತಕ್ಕ ಸುದಿನ ಎಂದು ಬಂದೀತು ಎಲ್ಲ ಕನ್ನಡಿಗರೂ ಎಂದು ಮತ್ತೆ ಒಂದುಗೂಡುವರು ಎಂಬ ಸುದಿನವನ್ನೇ ಅವರು ಹಾರೈಸುತ್ತಿದ್ದರು. ಆದರೆ ಕೆಲವು ರಾಜಕೀಯ ಕಾರಣಗಳಿಂದ ಅದು ಸಾಧ್ಯವಾಗದೆ ನಿಂತಿತ್ತು. 1947ರಲ್ಲಿ ನಾವು ಯಾವತ್ತು ಸ್ವಾತಂತ್ರ್ಯವನ್ನು ಗಳಿಸಿದೆವೋ ಆ ನಂತರ ಅಲ್ಲಿಯವರೆಗೂ ದೊರೆಯದಿದ್ದ ಅವಕಾಶ ದೊರೆಯುವುದಕ್ಕೆ ಒಂದು ಅವಕಾಶವನ್ನುಂಡುಮಾಡಿತು. ನಾನಾಗಲೇ ಹಿಂದೆ ಹೇಳಿದಹಾಗೆ ಸಾಧ್ಯವಾದಮಟ್ಟಿಗೂ ಒಂದು ಭಾಷೆಯನ್ನಾಡತಕ್ಕ ಜನರು ಒಂದೆಡೆಯಲ್ಲಿರಬೇಕು, ಅದರಿಂದ ಅನೇಕ ಅನುಕೂಲಗಳಿವೆ ಎಂಬುದನ್ನು ಮನಗಂಡಿದ್ದ ಬ್ರಿಟಿಷರು ಸಾಧ್ಯವಾದಮಟ್ಟಿಗೂ ಒಂದು ಭಾಷೆಯನ್ನಾಡತಕ್ಕ ಜನರನ್ನು ಎಲ್ಲರನ್ನೂ ಒಂದೇ ಕಡೆ ಇರುವುದಕ್ಕೆ ಅವಕಾಶ ಕೊಡದೆ ಸಾಧ್ಯವಾದಮಟ್ಟಿಗೂ ಅವರನ್ನು ಬೇರೆ ಬೇರೆ ಇಡತಕ್ಕದ್ದೇ ಸೂಕ್ತ, ಅದೇ ಅವರಿಗೆ ಲಾಭದಾಯಕ ಎಂಬುದನ್ನು ಮನಗಂಡು ಅವರು ಹಿಂದಿದ್ದ ಕನ್ನಡ ನಾಡನ್ನು ಹರಿದು ಭಿನ್ನ ಭಿನ್ನ ಭಾಷೆಗಳ ರಾಜ್ಯದಲ್ಲಿ ಅಳವಡಿಸಿದರು. ಇದು ಆ ದಿವಸ ಆ ಬ್ರಿಟಿಷರು ನಡೆಸಿದ ಒಂದು ಕುತಂತ್ರ. ಹೀಗೆ ಅವರು ಇಂಥದೇ ಕುತಂತ್ರವನ್ನು ಆ ಬೆಂಗಾಲ್ ಪಾರ್ಟಿಷನ್ ಮಾಡಲು ಹೊರಟಾಗ ಅವರು ಹೇಗೆ ಆ ಬ್ರಿಟಿಷರ ಮೇಲೆ ದಂಗೆ ಎದ್ದರು ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಆದರೆ ಅಂಥ ಒಂದು ಚಳವಳಿಯಾಗಲೀ ದಂಗೆಯಾಗಲಿ ಈ ಕನ್ನಡಿಗರ ವಿಭಜನೆಯಾದಾಗ ಇಲ್ಲಿ ಮೈಸೂರಿನಲ್ಲಿ ಅಂಥಾ ದಂಗೆ ಏಳಲಿಲ್ಲ. ಆ ಕಾಲದಿಂದಲೂ ಈ ಮೈಸೂರು ಒಂದು ಪ್ರಿನ್ಸಲಿ ಸ್ಟೇಟಾಗಿ ಉಳಿಯಿತು. ಅದಕ್ಕೆ ತಕ್ಕಹಾಗೆ ಕೌಲು ಕರಾರುಗಳು ಆದವು. ಅದಕ್ಕನುಸಾರವಾಗಿ ಈ ಮೈಸೂರು ರಾಜ್ಯವು

ಒಂದು ಬ್ರಿಟಿಷರ ಆಶ್ರಿತ ಸಂಸ್ಥಾನವಾಗೇ ಉಳಿದು ಬಂದಿತು. ಹೀಗಾಗಿ ಮೈಸೂರು ರಾಜ್ಯದಲ್ಲಿ ಒಂದು ಕಡೆ ಇದ್ದ ಕನ್ನಡಮಾತನಾಡತಕ್ಕ ಜನರು ಆ ಕಾಲದಿಂದಲೂ ಹರಿದು ಹಂಚಿ ಹೋಗಿ ಅಕ್ಕ ಪಕ್ಕದಲ್ಲಿದ್ದ ಮದ್ರಾಸ್, ಹೈದರಾಬಾದ್ ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ಸೇರಿಸಲ್ಪಟ್ಟಿದ್ದರು. ಆದರೆ ಮೈಸೂರಿನ ರಾಜಮನೆತನದವರೂ ಕೂಡ ಈ ಹಿಂದೆ ಆ ಹರಿದು ಹಂಚಿಹೋಗಿದ್ದ ಕನ್ನಡಿಗರನ್ನು ಒಂದು ಕಡೆ ಕೂಡಿಸತಕ್ಕ ಕಾರ್ಯದಲ್ಲಿ ಅವರು ಮುತವರ್ಜಿಯನ್ನು ಮಾಡಿದಂತೆ ಕಂಡುಬರುವುದಿಲ್ಲ. ಪ್ರಾಯಶಃ ಅವರ ಒಂದು ಸಿಂಹಾಸನದ ಹಕ್ಕುಬಾಧ್ಯತೆಯ ಬಗ್ಗೆ ತಾಪತ್ರಯ ಬರಬಹುದು ಎಂಬ ಕಾರಣದಿಂದಲೋ ಏನೋ ಅವರು ಇದಕ್ಕೆ ಪ್ರಯತ್ನ ಪಡಲಿಲ್ಲ. ಆದರೆ ಹೀಗೆ ಎಲ್ಲೆಲ್ಲಿ ಒಂದು ಭಾಷೆಯನ್ನಾಡತಕ್ಕ ಜನರನ್ನು ಆ ಬ್ರಿಟಿಷರು ತಮ್ಮ ಒಂದು ಸ್ವಾರ್ಥ ಸಾಧನೆಗಾಗಿ ಹರಿದು ಅನ್ಯಭಾಷಾ ಜನರೊಡನೆ ಬೆರೆಸಿದ್ದರೋ ಅಂಥಾ ಜನರನ್ನೆಲ್ಲಾ ಮತ್ತೆ ಒಂದುಗೂಡಿಸಬೇಕು ಎಂಬ ಒಂದು ಹಂಬಲವನ್ನು ಮಹಾತ್ಮಾ ಗಾಂಧಿಯವರೂ ಮತ್ತು ಜವಹರಲಾಲ್ ನೆಹರೂರವರು ಬಹಳ ಹಿಂದಿನಿಂದಲೂ ವ್ಯಕ್ತಪಡಿಸುತ್ತಾ ಬಂದಿದ್ದರು. ಆದ್ದರಿಂದಲೇ ದೇಶಕ್ಕೆ ಸ್ವಾತಂತ್ರ್ಯ ಬಂದಕೂಡಲೇ ದೇಶವನ್ನು ಮತ್ತೆ ಭಾಷಾವಾರು ತಳಹದಿಯ ಮೇಲೆ ವಿಭಜನೆಮಾಡಬೇಕೆಂದು ತೀರ್ಮಾನಕ್ಕೆ ಬಂದರು. ಈ ಒಂದು ವಿಭಜನೆಯ ವಿಚಾರ 1922 ರಿಂದಲೂ ಹೊಗೆಯಾಡುವುದಕ್ಕೆ ಪ್ರಾರಂಭವಾಯಿತು. ಆದರೆ ಇದು ಸಂಪೂರ್ಣವಾಗಿ ಕನಸು ನನಸಾದದ್ದು ನಮಗೆ ಸ್ವಾತಂತ್ರ್ಯಬಂದ ನಂತರವೇ. ಹೀಗೆ ರಾಜ್ಯಗಳನ್ನು ಯಾವಾಗ ಸ್ಥೂಲವಾಗಿ ಒಂದು ಭಾಷಾ ತಳಹದಿಯ ಮೇಲೆ ವಿಭಜನೆ ಮಾಡಲಾಯಿತೋ ಆ ಕಾಲದಲ್ಲಿ ಆಯಾಯ ರಾಜ್ಯಗಳಿಗೆ ಆಯಾಯ ಭಾಷೆಯ ಹೆಸರನ್ನೇ ಇಡಬೇಕೆಂಬ ಒಂದು ಪ್ರಶ್ನೆ ಉದ್ಭವವಾದಾಗ ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯವರು ಒಂದು ತಿದ್ದುಪಡಿಯನ್ನು ತಂದು ಆ ಹೆಸರನ್ನಿಡುವುದನ್ನು ಅವರವರ ಒಪ್ಪಿಗೆಗೆ ಬಿಟ್ಟರು. ನ್ಯಾಯವಾಗಿ ಯಾವ ರಾಜ್ಯದಲ್ಲಿ ಯಾವ ಭಾಷೆಯ ಮಾತನಾಡತಕ್ಕ ಜನರಿದ್ದಾರೋ ಆ ರಾಜ್ಯಕ್ಕೆ ಅಥವಾ ಆ ರಾಜ್ಯವನ್ನು ಆ ಭಾಷೆಯ ಹೆಸರಿಂದಲೇ ಕರೆಯಬೇಕೆಂಬುದು ನ್ಯಾಯವಾದದ್ದು. ಆದರೆ ಆಗ ಅದು ಹಾಗೆ ಆಗಲಿಲ್ಲ. ಆ ತತ್ವವನ್ನು ಆಚರಣೆಗೆ ತರಲಿಲ್ಲ. ಮತ್ತು ಮೈಸೂರಿನವರೂ ಕೂಡ ಆ ದಿವಸ ರಾಜ್ಯಕ್ಕೆ ರಾಜ್ಯದ ಮುಖ್ಯ ಭಾಷೆ ಯಾವುದಿದೆಯೋ ಆ ಭಾಷೆಯ ಹೆಸರಿಂದಲೇ ಈ ರಾಜ್ಯವನ್ನು ಕರೆಯಬೇಕೆಂದು ಇಷ್ಟಪಡಲಿಲ್ಲ. ಆ ವಿಚಾರ ಏನೇ ಇರಲಿ, ನಾವು ಈ ದಿವಸ ಒಂದು ಭಾಷೆಯನ್ನಾಡತಕ್ಕ ಜನ ಒಂದು ಛತ್ರದಾಶ್ರಯದಲ್ಲಿ ಸೇರಿದ್ದೇವೆ. ಹಿಂದೆ ಈ ಮೈಸೂರಿನವರು ಆ ಎ. ಐ. ಸಿ. ಸಿ. ಯವರ ನಿರ್ಣಯದ ಪ್ರಕಾರ ಈ ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರನ್ನು ಇಡಬೇಕೆಂದು ಹೇಳಿದ್ದನ್ನು ಆಗ ಒಪ್ಪಿರಲಿಲ್ಲ. ಇವರು ಈ ಮೈಸೂರಿನ ಹೆಸರು ಮೈಸೂರಾಗೇ ಉಳಿಯಬೇಕೆಂದು ಹೇಳಿದ್ದರಿಂದ ಈ ರಾಜ್ಯದ ಹೆಸರು ಹಾಗೇ ಉಳಿಯಿತು. ಅದನ್ನೇ ಮೈಸೂರಿನವರು ಮತ್ತು ಮೈಸೂರು ಶಾಸನ ಸಭೆಯವರೂ ಒಪ್ಪಿದ್ದರು. ಆ ಒಂದು ರಾಜೀ ಸೂತ್ರದಿಂದ ಹೇಗೋ ಈಗಿರತಕ್ಕ ಹೆಸರು ಹಾಗೇ ಉಳಿಯಿತು. ಆದರೆ ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಜ್ಞಾಪಕ ಮಾಡಿಕೊಳ್ಳಬೇಕಾದ ಒಂದಂಶವೇನೆಂದರೆ ಹಿಂದೆ ಒಂದು ರಾಜೀಸೂತ್ರದ ಪ್ರಕಾರ ಈ ರಾಜ್ಯಕ್ಕೆ ಏನು ಒಂದು ಹೆಸರನ್ನು ಇಟ್ಟುಕೊಂಡಿದ್ದಾರೆ ಅದನ್ನು ಈಗ ಬದಲಾವಣೆ ಮಾಡುವುದಕ್ಕೆ ಏನಾದರೂ ಕಾನೂನು ಅಡ್ಡಿಬರುತ್ತದೆಯೋ ಅನ್ನುವುದು, ಅದು ಬೇರೆ ವಿಷಯ. ಅದರ ಬಗ್ಗೆ ನಾನೀಗ ಪ್ರಸ್ತಾಪಮಾಡುತ್ತಿಲ್ಲ. ಆದರೆ ಈಗ ಏನು ಅಲ್ಲಲ್ಲಿ ಒಂದು ಚಳವಳಿ, ಈ ರಾಜ್ಯವನ್ನು ಕರ್ಣಾಟಕ ಎಂಬ ಹೆಸರಿನಿಂದ ಕರೆಯಬೇಕು ಎಂಬ ಬಗ್ಗೆ ಏಳುತ್ತಿದೆ, ಅದು ನನ್ನ ಅಭಿಪ್ರಾಯದಲ್ಲಿ ಸರಿಯಿದ್ದಹಾಗೆ ಕಾಣುವುದಿಲ್ಲ. ಅದೇ ರೀತಿ ಈ ರಾಜ್ಯಕ್ಕೆ ಮೈಸೂರು ಎಂದು ಹೆಸರಿಟ್ಟಿರುವುದೂ ಕೂಡ ಸರಿಯಲ್ಲ. ಈ ಎರಡು ಶಬ್ದಗಳೂ ಸರಿಯಲ್ಲ. ಆದರೆ ಈ ರಾಜ್ಯದ ಬಹು ಸಂಖ್ಯಾತ ಜನರು ಯಾವ ಭಾಷೆಯನ್ನು ಬಳಸುತ್ತಿದ್ದಾರೋ ಆ ಭಾಷೆಯ ಹೆಸರಿನಿಂದಲೇ ಈ ರಾಜ್ಯವನ್ನು ಕರೆಯಬೇಕು, ಇದಕ್ಕೆ ಆ ಭಾಷೆಯ ಹೆಸರನ್ನೇ ಇಡಬೇಕಾದ್ದು ನ್ಯಾಯ ಎಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ಒಂದು ಹಿನ್ನೆಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಈಗ ನಮ್ಮ ರಾಜ್ಯಕ್ಕೆ ಕನ್ನಡನಾಡು ಎಂಬ ಹೆಸರನ್ನಿಡಬೇಕು ಎಂಬುದಾಗಿ ಒಂದು ನಿರ್ಣಯವನ್ನು ಸಭೆಯ ಮುಂದೆ ತಂದಿದ್ದೇನೆ. ಆದರೆ ಶ್ರೀಮಾನ್ ಚೆನ್ನಬಸಪ್ಪನವರು ಹೆಸರಿನಲ್ಲೇನಿದೆ, ನಮಗೆ ಯಾವ ಹೆಸರಾದರೇನು ನಮಗೆ ಫಲಕೊಡತಕ್ಕದ್ದು ಮುಖ್ಯ ಎಂದು ಹೇಳುತ್ತಿದ್ದಾರೆ. ಇರಲಿ. ರಾಜ್ಯಕ್ಕೆ ಇಂಥದ್ದೇ ಒಂದು ಹೆಸರಿರಬೇಕು ಎಂಬುದೂ ಕೂಡ ಒಂದು ಬಗೆಯ ಹಂಬಲವೇ. ನಮಗೆ ನಾನಾ ಹಂಬಲಗಳಿರುತ್ತವೆ. ಅವುಗಳಲ್ಲಿ ಈ ಹೆಸರಿನ ಹಂಬಲೂ ಕೂಡ ಒಂದು. ನಮಗೆ ಸ್ವರಾಜ್ಯ ಬಂದರೆ ಮತ್ತೆ ಭಾಷಾವಾರು ರಾಜ್ಯಗಳನ್ನು ನಿರ್ಮಾಣ ಮಾಡುತ್ತೇವೆ ಎಂಬ ಕನಸನ್ನು ಕಾಣುತ್ತಿದ್ದ ಜನಕ್ಕೆ ಅದು ಈ ದಿವಸ ನನಸಾಗಿದೆ. ಸಾಲದುದಕ್ಕೆ ರಾಜ್ಯದಲ್ಲಿ ಸಾಕಷ್ಟು ಕೈಗಾರಿಕಾ ಪ್ರಗತಿಯಾಗಿದೆ, ವಿದ್ಯಾ ಪ್ರಗತಿಯಾಗಿದೆ, ಲಂಚನಿವಾರಣೆಯ ಬಗ್ಗೆ ಸಾಕಷ್ಟು ಕ್ರಮವನ್ನು ಕೈಗೊಳ್ಳಲಾಗಿದೆ. ಇಷ್ಟೆಲ್ಲಾ ಆಗಿರುವಾಗ ನಮ್ಮ ಒಂದು ಆ ಭ್ರಾಂತಿಯ ಜೊತೆಗೆ

(ಶ್ರೀ ಎಲ್. ಶ್ರೀಕಂಠಯ್ಯ)

ಸಾಂಸ್ಕೃತಿವಾಗಿಯೂ ಮತ್ತು ಐತಿಹಾಸಿಕವಾಗಿಯೂ ನಾವು ಆ ಒಂದು ಹೆಸರಿಗಾಗಿ ಮಾರು ಹೋಗಿರುವುದರಿಂದ ನಮ್ಮ ರಾಜ್ಯಕ್ಕೆ ಕನ್ನಡನಾಡು ಎಂಬ ನಾಮಕರಣ ಮಾಡುವುದು ಸೂಕ್ತ ಎಂದು ಈ ದಿವಸ ಅನೇಕರು ಹೇಳುತ್ತಿದ್ದಾರೆ. ಅದಕ್ಕೆ ಈಗ ಒಂದು ಉತ್ತಮವಾದ ಸನ್ನಿವೇಶ ಉಂಟಾಗಿದೆ. ಶ್ರೀಮಾನ್ ಚನ್ನಬಸಪ್ಪನವರು ಕೂಡ......

Sri H. M. CHANNABASAPPA.—He is mentioning my name at every stage. Therfore, a word of explanation is necessary. I have not yet spoken. I am going to speak and express my opinion. He is taking for garnted that I said something and goes on misinterpreting my views. I have only requested him to tell us in what manner any one of these names is going to influence these items. ಅದನ್ನು ಹೇಳುವುದನ್ನು ಬಿಟ್ಟು ಚನ್ನಬಸಪ್ಪ ಹಾಗೆ ಹೇಳುತ್ತಾನೆ ಹೀಗೆ ಹೇಳುತ್ತಾನೆ ಅಂತ ಹೇಳಿದರೆ ಅದಕ್ಕೆ ನಾನು ಏನು ಹೇಳಲಿ ?

4-30 P.M.

ಶ್ರೀ ಎಲ್. ಶ್ರೀಕಂಠಯ್ಯ.—ಇನ್ನು ಈ ರಾಜ್ಯಕ್ಕೆ ಕರ್ಣಾಟಕವೆಂದು ಹೆಸರು ಇಡಬೇಕೆಂದು ಕರ್ಣಾಟಕವಾದಿಗಳು ಕೊಟ್ಟಿರುವ ಕಾರಣಗಳನ್ನು ನಾನು ಲಿಸ್ಟ್ ಮಾಡಿದೆ. ಈ ರಾಜ್ಯದ ಹೆಸರು ಬಹಳ ಹಿಂದಿನ ಕಾಲದಿಂದಲೂ ಕರ್ಣಾಟಕ ಎಂದು ಇತ್ತು, ಆದುದರಿಂದ ಆ ಶಿರೋನಾಮೆ ಬಹಳ ಒಳ್ಳೆಯ ಹೆಸರು ಎಂದು ಕೆಲವರ ವಾದ. ಕನ್ನಡ ಎಲ್ಲಿ ಮಾತನಾಡುತ್ತಾರೋ ಆ ಪ್ರದೇಶದ ಹೆಸರು ಹಿಂದೆ ನಾನು ಕೊಟ್ಟಂತೆ 'ಎರಮೈನಾಡು' ಎಂಬುದಾಗಿ ಇತ್ತೇ ಹೊರತು, ಕರ್ಣಾಟಕವೆಂದು ಇರಲಿಲ್ಲ. ಐತಿಹಾಸಿಕ ದೃಷ್ಟಿಯಿಂದ ದೊರೆಯುವ ಅಂಕಿ ಅಂಶಗಳ ಪ್ರಕಾರ ಈ ರಾಜ್ಯಕ್ಕೆ 'ಕುಂತಳರಾಜ್ಯ' ಎಂಬುದಾಗಿ ಹೆಸರಿತ್ತು. ನಾನು ಮೊದಲೇ ಹೇಳಿದಹಾಗೆ ಕರ್ಣಾಟ ಎಂಬ ಶಬ್ದ ಕರ್ಣಾಟಕ ಎಂಬ ಶಬ್ದದಿಂದ ಉತ್ಪತ್ತಿಯಾಗಿದೆ. ಅದೇ ಶಬ್ದದಿಂದ ಕನ್ನಡ ಎಂಬ ಶಬ್ದ ಉತ್ಪತ್ತಿಯಾಗಿದೆ. ಕರು, ಣಾಟ, ಕರ್ಣಾಟ. ಹೀಗಿರುವಾಗ ಬಹಳ ಕಾಲದಿಂದ ಕರ್ಣಾಟ ಎಂಬ ಹೆಸರು ಇತ್ತು ಎನ್ನುವ ಬಗ್ಗೆ ದಾಖಲೆಗಳನ್ನು ಈಗ ಒದಗಿಸುವುದಕ್ಕೆ ಸಾಧ್ಯವಿಲ್ಲ. ವಿಜಯನಗರ ಸಾಮ್ರಾಜ್ಯಕಾಲದಲ್ಲಿ ಕರ್ಣಾಟಕ ರತ್ನ ಸಿಂಹಾಸನಾಧೀಶ್ವರ ಎಂಬ ಬಿರುದನ್ನು ಆಗಿನ ಆಳರಸರು ಇಟ್ಟುಕೊಂಡಿದ್ದರು. ಆದರೆ ವಿಜಯನಗರ ಸಾಮ್ರಾಜ್ಯ ಎಲ್ಲಿಯವರೆಗೆ ವ್ಯಾಪ್ತಿ ಇತ್ತೋ ಆ ಪ್ರದೇಶಕ್ಕೆ ಸೇರಿದ ಹಾಗೆ ಬಹುಶಃ ಮೈಸೂರು ರಾಜ್ಯವೂ ಇತ್ತು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಪುರಾಣಗಳ ಕಾಲದಲ್ಲಿ ಕರ್ಣಾಟಕ ಎಂಬ ರಾಕ್ಷಸ ಇದ್ದನೆಂಬ ಪ್ರತೀತಿ ಇದೆ. ಅದು ಮಾನ್ಯ ಸದಸ್ಯರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಈ ಮಾತನ್ನು ಇಲ್ಲಿ ನಾನು ಹಿಂದೆ ಹೇಳಿದಾಗ ಮಾನ್ಯ ಸದಸ್ಯರು ಇಲ್ಲಿ ಇದ್ದರೊ ಇಲ್ಲವೋ ಗೊತ್ತಿಲ್ಲ. ಆ ವಿಷಯದಲ್ಲಿ ವಿದ್ವಾಂಸರುಗಳಲ್ಲಿ ಭಿನ್ನಾಭಿಪ್ರಾಯ ಇದೆ. ಕರ್ಣಾಟ ಎಂಬ ಶಬ್ದವನ್ನು ಮಹಾಭಾರತದಲ್ಲಿಯೂ ಉಪಯೊಗಿಸಲ್ಪಟ್ಟಿದೆಂಬುದಾಗಿ ಕೆಲವರ ವಾದ. ಕೆಲವರು ಏನು ಹೇಳಿದರು ಅಂದರೆ ಈ ಶಬ್ದ ಕ್ರಮೇಣ ಸೇರಿಸಲ್ಪಟ್ಟ ಶಬ್ದ ಎಂದು. ಆದರೆ ಮೂಲಭಾರತದಲ್ಲಿ ಈ ಶಬ್ದವಿಲ್ಲವೆಂಬ ವಾದವಿದೆ. ಎರಡನೆಯದು ಹಿಂದೆ ಕರ್ಣಾಟಕನೆಂಬ ರಾಕ್ಷಸನಿದ್ದ. ಅದೇ ರೀತಿಯಲ್ಲಿ ಕದಂಬನೆಂಬ ರಾಕ್ಷಸನೂ ಇದ್ದ. ಅಂಥ ನಾಮ ರಾಕ್ಷಸನೂ ಇದ್ದ. ಕನ್ನಡನಾಡಿನಲ್ಲಿ ಕದಂಬ ರಾಜ್ಯವಿತ್ತು. ಆಗ ಕರ್ಣಾಟಕವೆಂಬ ಹೆಸರು ಈ ರಾಜ್ಯಕ್ಕೆ ಇತ್ತು ಎಂಬ ವಾದವಿದೆ. ಮಹಿಷಾಸುರನೆಂಬ ರಾಕ್ಷಸನೂ ಸಹ ಇದ್ದ. ಇದನ್ನು ಸಮರ್ಥಿಸಬೇಕೋ ಅಥವಾ ಬಿಡಬೇಕೋ ಎಂಬ ಬಗ್ಗೆ ಸಾಕಷ್ಟು ಆಧಾರವಿಲ್ಲ. ಕರ್ಣಾಟಕ ಪರವಾಗಿ ಬಹಳ ವಾದಮಾಡುವವರು ಈ ಹೆಸರು ಬಹಳ ಕಾಲದಿಂದ ಇದೆಯೆಂದು ಹೇಳುತ್ತಿದ್ದಾರೆ. ನಾನು ಹೇಳುವುದು ಇದು ಬಹಳ ವರ್ಷಗಳಿಂದೇನೂ ಇಲ್ಲ. ಈಚೆಗೆ ಪ್ರಚಲಿತವಾಗಿ ಬಂದದ್ದು. ಬಹುಶಃ ಇದು ಬ್ರಿಟೀಷರ ಕಾಲದಲ್ಲಿ ಇದ್ದುದು ಎಂದು ನನಗೆ ಕಾಣುತ್ತದೆ. ರಾಜ್ಯ ಪುನರ್ವಿಂಗಡನೆಯಾದಮೇಲೆ ಮೈಸೂರು ರಾಜ್ಯ ಪ್ರತ್ಯೇಕವಾಗಿ ಉಳಿಯಿತು. ಕನ್ನಡ ಮಾತನಾಡುವವರು ಇತರ

ಭಾಗಗಳಲ್ಲಿಯೂ ಇದ್ದರು. ಹಿಂದೆ ಕರ್ಣಾಟಕ ಇತಿಹಾಸದಲ್ಲಿ ವಿದ್ಯಾವಂತ ವರ್ಗದವರು ಕನ್ನಡ ಮಾತನಾಡುವ ಜನರು ಇರುವ ಪ್ರದೇಶಕ್ಕೆ ಒಂದು ಹೆಸರು ಇಡಬೇಕಾಗಿ ಬಂತು. ಆಗ ಅವರು ಕರ್ಣಾಟಕ್ ಎಂದು ಹೇಳಿದರು. ಏಷ್ಯ ಭಾಗದಲ್ಲಿ ಇರುವವರಿಗೆ ಏಷಿಯಾಟಿಕ್ ಎಂದು ಹೇಗೆ ಹೇಳುತ್ತೇವೋ ಹಾಗೆಯೇ ಕರ್ಣಾಟ ಎನ್ನುವುದು ಕರ್ಣಾಟಿಕ್ ಆಯಿತು. ಅದೇ ರೀತಿಯಲ್ಲಿ ಕರ್ಣಾಟಿಕ್ ಮ್ಯೂಸಿಕ್ ಎಂದೂ ಆಯಿತು. ಆಲ್ ಇಂಡಿಯಾ ರೇಡಿಯೋನವರೂ ಸಹ ಬ್ರಾಡ್ ಕ್ಯಾಸ್ಟ್ ಮಾಡುವಾಗ ಕರ್ಣಾಟಿಕ್ ಮ್ಯೂಸಿಕ್ ಎಂದು ಹೇಳುತ್ತಾರೆ. ಏಷಿಯನ್, ಕರ್ಣಾಟಿಯನ್ ಎಂದು ಹೇಳುವುದು ಕಿವಿಗೆ ಅಷ್ಟು ಇಂಪಾಗಿ ಇರುವುದಿಲ್ಲ. ಅದಕ್ಕಾಗಿ ಕರ್ಣಾಟಿಕ್ ಎಂದು ಆಯಿತು. ಅಂದರೆ ಮೈಸೂರು ರಾಜ್ಯ ಬಿಟ್ಟು ಉಳಿದ ಎಲ್ಲಿ ಕನ್ನಡ ಮಾತನಾಡುತ್ತಿದ್ದರೋ ಅಲ್ಲಿ ಕನ್ನಡ ಮಾತನಾಡುವ ಜನರಿಗೆ ಒಂದು ಹೆಸರನ್ನು ಕೊಡುವುದಕ್ಕಾಗಿ ಅವರನ್ನು ಕರ್ಣಾಟಿಕ್ ಎಂದು ಕರೆದರು. ಆ ಕಾಲದಲ್ಲಿಯೇ ಕರ್ಣಾಟಿಕ್ ಎಂಬ ಹೆಸರು ಪ್ರಚಲಿತವಾಗಿ ಬಂತು. ಅದರಲ್ಲಿ ಆ ಹೆಸರಿನ ಹಿನ್ನೆಲೆ ಸೇರಿದೆ. ರಾಷ್ಟ್ರೀಯ ಮುಖಂಡರು ಮೈಸೂರು ರಾಜ್ಯದಲ್ಲಿ ಎಷ್ಟೇ ಹೋರಾಟ ನಡೆಸಿದರೂ ಭಾರತದಂಥ ಒಂದು ದೊಡ್ಡ ಕ್ಯಾನ್‌ವಾಸ್‌ನಲ್ಲಿ ಮೈಸೂರು ರಾಜ್ಯ ಅಷ್ಟು ಪ್ರಾಮುಖ್ಯತೆಗೆ ಬರಲಿಲ್ಲ. ನಾವು ಎಷ್ಟೇ ಮುಖಂಡರುಗಳನ್ನು ಮುಂದೂಡಿದರೂ ಕೂಡ ಅವರು ನ್ಯಾಷನಲ್ ಲೀಡರ್ಸ್ ಆಗುತ್ತಿರಲಿಲ್ಲ. ಮಾನ್ಯ ಶ್ರೀ ಹಾರ್ಡೀಕರ್ ಅವರು ಕನ್ನಡ ಜನತೆಯ ಪರವಾಗಿ ಬಹಳವಾಗಿ ಮಾತನಾಡುತ್ತಿದ್ದರು. ಆದರೆ ಮೈಸೂರು ರಾಜ್ಯದಲ್ಲಿ ಮಾನ್ಯ ಶ್ರೀ ಚಂಗಲರಾಯ ರೆಡ್ಡಿಯವರೂ, ಶ್ರೀ ದಾಸಪ್ಪನವರೂ, ಮತ್ತು ಇತರ ಚೋಟಾ ಲೀಡರ್ಸ್ ಮೈಸೂರು ಜನತೆಯ ಪರವಾಗಿ ಮಾತನಾಡುತ್ತಿದ್ದರು. ಆದರೆ ಕರ್ಣಾಟಕ ಪ್ರದೇಶಗಳಲ್ಲಿರತಕ್ಕ ಮುಖಂಡರುಗಳು ಅಲಹಾಬಾದ್ ಮತ್ತು ದೆಹಲಿ ಹತ್ತಿರ ಅಡ್ಡಾಡಿ ಕರ್ಣಾಟಕ ಎಂಬ ಶಬ್ದವನ್ನು ಉಪಯೋಗಿಸಿದ್ದರಿಂದ, ಆಲ್ ಇಂಡಿಯಾ ಪೇಪರ್ಸ್‌ನಲ್ಲಿ ಆ ಹೆಸರಿಗೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿತು. ಈಗ ಪರಿಸ್ಥಿತಿ ಬೇರೆಯಾಗಿದೆ. ಮದ್ರಾಸ್, ಹೈದರಾಬಾದ್ ಮುಂತಾದ ಪ್ರದೇಶಗಳಿಂದ ಕನ್ನಡ ಮಾತನಾಡುವವರು ವಿಫುಲ ಸಂಖ್ಯೆಯಲ್ಲಿ ಮೈಸೂರು ರಾಜ್ಯಕ್ಕೆ ಬಂದು ಸೇರಿಕೊಂಡು ಕರ್ಣಾಟಕವೆಂದು ಹೆಸರಿಡಬೇಕೆಂದು ಹೇಳುತ್ತಿದ್ದಾರೆ. ಆದರೆ ಮೈಸೂರು ರಾಜ್ಯದಲ್ಲಿರತಕ್ಕವರು ಆ ಹೆಸರನ್ನು ಒಪ್ಪುತ್ತಾರೆಂದು ನಾನು ಖಂಡಿತವಾಗಿ ತಿಳಿದುಕೊಂಡಿಲ್ಲ. ಈಗ ಉಂಟಾಗಿರತಕ್ಕ ಪರಿಸ್ಥಿತಿಯಲ್ಲಿ ಕರ್ಣಾಟಕವೆಂದು ಹೇಳಿದರೆ ಅದನ್ನು ವಿರೋಧಿಸುವವರೂ ಇದ್ದಾರೆ, ಮೈಸೂರು ಎಂದು ಹೇಳಿದರೆ ಅದನ್ನೂ ಸಹ ವಿರೋಧಿಸುವವರೂ ಇದ್ದಾರೆ. ಈ ದೃಷ್ಟಿಯಲ್ಲಿ ನಾನು ಸೂಚಿಸಿರುವುದು ವೈಯಾಮಿಡಿಯಾ ಆಗಿದೆ. ಅವರ ಸೆಂಟಿಮೆಂಟ್, ನಮ್ಮ ಸೆಂಟಿಮೆಂಟ್ ಯಾವುದನ್ನೂ ನೋಯಿಸುವುದೂ ಬೇಡ. ನಾವು ಕನ್ನಡಿಗರು ಎಂಬುದಾಗಿ ಕರೆದುಕೊಳ್ಳುವುದಕ್ಕೆ ನಮಗೆ ಹೆಮ್ಮೆ. ಉಭಯತ್ರರಿಗೂ ಸೂಕ್ತವಾಗಿ ಒಪ್ಪುವ ಮಾತು ಅಂದರೆ ನಾವು ಕನ್ನಡಿಗರು ಆದಮೇಲೆ ಕನ್ನಡ ನಾಡು ಎಂಬುದಾಗಿ ಕರೆಯುವುದು. ಇದಕ್ಕೇಕೆ ನಾಚಿಕೆಗೊಳ್ಳಬೇಕು ? ಇದು ಒಂದು ಹೆಮ್ಮೆಯ ಮಾತು. ಮೈಸೂರಿನವರೂ ಅವರ ಒಂದು ತತ್ವವನ್ನು ಈ ಸಭೆಯ ಮುಂದೆ ಇಡುತ್ತಿದ್ದಾರೆ, ಕರ್ಣಾಟಕವಾದಿಗಳೂ ಸಹ ಒಂದು ತತ್ವವನ್ನು ಈಗ ನಮ್ಮ ಮುಂದೆ ಇಡುತ್ತಿದ್ದಾರೆ.

ಇನ್ನೊಂದು ಕಾರಣ ಕರ್ಣಾಟಕವಾದಿಗಳು ಹೇಳುತ್ತಾರೇನೆಂದರೆ ಎಸ್.ಆರ್.ಸಿ. ರಿಪೋರ್ಟು ಬಂದಾಗ ಕೂಡ ರಾಜ್ಯದ ಹೆಸರು ಕರ್ಣಾಟಕ ಎಂದು ಸಮ್ಮತಿಸಿದರು, ಎಂದು. ಅವರು ವಿತರ್ಕೋಸ್ಕರ ಎಸ್.ಆರ್.ಸಿ. ರಿಪೋರ್ಟಿನಲ್ಲಿ ಕರ್ಣಾಟಕವೆಂದು ಹೇಳಿದ್ದಾರೆಂಬುದಕ್ಕೆ ಅವರು ಕೊಟ್ಟ ಹಿನ್ನೆಲೆಯನ್ನು ಕೊಡುತ್ತೇನೆ. ಎಸ್.ಆರ್.ಸಿ. ಕಮಿಶನ್ ಬರುವಾಗ, ಮೈಸೂರು ರಾಜ್ಯ ಎಂದು ಹೇಳುವುದಕ್ಕೆ ಅವರಿಗೆ ಇಷ್ಟವಿರಲಿಲ್ಲ. ಅವರು ಒಂದು ಬ್ರಾಡ್ ಪ್ರಿನ್ಸಿಪಲ್ ಇಟ್ಟುಕೊಂಡಿದ್ದಾರೆ. ಎಸ್.ಆರ್.ಸಿ. ಕಮಿಶನ್ ಏನು ಮಾಡಿದರೆಂದರೆ, ತಮಿಳು ನಾಡು, ಆಂಧ್ರ ಪ್ರದೇಶ ಎಂದು ಎಲ್ಲಾ ಮಾಡುತ್ತಾ ಹೋಗುವಾಗ, ನಮ್ಮ ರಾಜ್ಯದಲ್ಲಿ ಒಂದು ಪ್ರಚಲಿತವಾದ ಶಬ್ದಕ್ಕೆ—ಅಂದರೆ ಕರ್ಣಾಟಕ ಪ್ರಜಾ ಸೋಷಲಿಸ್ಟ್ ಪಾರ್ಟಿ, ಕರ್ಣಾಟಕ ಕಮ್ಯೂನಿಸ್ಟ್ ಪಾರ್ಟಿ ಮುಂತಾದ ಶಬ್ದಕ್ಕೆ ಮಹತ್ವವನ್ನು ಕೊಟ್ಟ ಆ ಶಬ್ದವನ್ನೇ ಆಧಾರವಾಗಿ ತೆಗೆದುಕೊಂಡು, ಅದೇ ಹೆಸರನ್ನು ಈ ನಮ್ಮ ರಾಜ್ಯಕ್ಕೆ ಇಟ್ಟರೇ ಹೊರತು ಇನ್ನಾವುದರ ಆಧಾರದಮೇಲೂ ಇಡಲಿಲ್ಲ.

ಮತ್ತೊಂದು ವಾದವೇನೆಂದರೆ—ಮೈಸೂರು ದೇಶದ ಈ ಕನ್ನಡವನ್ನು ಮಾತನಾಡತಕ್ಕಂತಹ ಜನರು, ಎಲ್ಲರನ್ನೂ ಒಂದುಗೂಡಿಸುವುದಕ್ಕೆ, ಜನರೆಲ್ಲಾ ಕನ್ನಡ ಮಾತನಾಡುವುದಕ್ಕೆ ಮೈಸೂರು ರಾಜ್ಯದವರನ್ನು ಬಿಟ್ಟು ಉಳಿದ ಪ್ರದೇಶದಲ್ಲಿರತಕ್ಕಂತಹ ಜನರು ಶ್ರಮಿಸಿದ್ದಾರೆ, ಮೈಸೂರಿನಲ್ಲಿರುವವರು ಏನೂ ಶ್ರಮಿಸಿರಲಿಲ್ಲ, ಎಂದು, ಆದರೆ ಕನ್ನಡ ಮಾತನಾಡತಕ್ಕ ಜನ ಒಂದುಗೂಡಬೇಕು ಎನ್ನತಕ್ಕವಾದ ಮೈಸೂರು ರಾಜ್ಯದ ಜನರಲ್ಲಿ ಎಷ್ಟು ಹಂಬಲವಿತ್ತೋ, ಅಷ್ಟೇ ಹಂಬಲ ಇತರ ಭಾಗಗಳಲ್ಲಿ ವಾಸಮಾಡತಕ್ಕ ಜನರಲ್ಲೂ ಇತ್ತು. ಈ ರಾಜ್ಯದ ಕನ್ನಡವನ್ನು ಮಾತನಾಡತಕ್ಕ

(ಶ್ರೀ ಎರ್. ಶ್ರೀಕಂಠಯ್ಯ)

ಜನರೆಲ್ಲರೂ ಕೂಡ ಒಂದುಗೂಡಬೇಕು ಎನ್ನತಕ್ಕ ಛಲ ಮೈಸೂರು ರಾಜ್ಯದವರಿಗೆ ಅಲ್ಲದೆ ಬೇರೆ ಕಡೆಯ ಜನರಿಗೆ ಕೂಡ ಇತ್ತು. ನಮಗೆ ಛಲವಿಲ್ಲವೆಂದು ಹೇಳುವುದರಲ್ಲಿ ಏನೂ ಹುರುಳಿಲ್ಲ. ಆದರೆ ರಾಜಕೀಯ ಕಾರಣಗಳಿಂದ ಅಷ್ಟು ಅವಕಾಶ ಸಿಗಲಿಲ್ಲ, ಈ ಒಂದು ಕಾರಣದಿಂದಲೂ ಕರ್ಣಾಟಕವೆಂದು ಇರಬೇಕೆಂದು ವಾದ ಮಾಡಿದರೆ ಅದು ರಾಜಕೀಯ ದೃಷ್ಟಿಯಿಂದಲೂ, ಮತ್ತು ವಾಸ್ತವಿಕ ದೃಷ್ಟಿಯಿಂದಲೂ, ಒಂದು ಹುರುಳಿಲ್ಲದ ವಾದವಾಗಿದೆ.

ಇಷ್ಟು ಹೇಳಿ ಮುಖ್ಯವಾದ ಎರಡು ವಿಷಯಗಳನ್ನು ಈ ಸಭೆಯ ಮುಂದಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ. ಈಗ ಎಲ್ಲೆಲ್ಲಿ ಕನ್ನಡವನ್ನು ಮಾತನಾಡುತ್ತಿದ್ದಾರೆ, ಅಂಥ ಜನರನ್ನು ಯಾರು ಕೂಡ ಕರ್ಣಾಟಕರು ಎಂದು ಕರೆಯುವುದಿಲ್ಲ. ಏಕೆಂದರೆ ನಮ್ಮ ಮೈಸೂರು ಪ್ರದೇಶದಲ್ಲಿ ಕರ್ಣಾಟಕರು ಎಂದರೆ ಅದು ಒಂದು ಜಾತಿಯಾಗಿ ಬಿಟ್ಟಿದೆ. ಅವರಿಗೆ ಹಳೆಯ ಕರ್ಣಾಟಕರು, ಹೊಸ ಕರ್ಣಾಟಕರು ಎಂದು ಕರೆಯುತ್ತಾರೆ. ಅದು ಒಂದು ಪ್ರತ್ಯೇಕವಾದ ಜಾತಿಯಾಗಿ ಬಿಟ್ಟಿದೆ, ಕನ್ನಡ ಮಾತಾಡುವವರನ್ನು ಕನ್ನಡಿಗರೆಂದು ಹೇಳುತ್ತಾರೆಯೇ ಹೊರತು, ಕರ್ಣಾಟಕರು ಎಂದು ಹೇಳುತ್ತಾ ಇಲ್ಲ. ಅದನ್ನು ಸ್ವಲ್ಪ ಜ್ಞಾಪಕದಲ್ಲಿಟ್ಟುಕೊಂಡು ಕರ್ಣಾಟಕರು ಎಂದು ಕರೆಯುವುದಕ್ಕಾಗುವುದಿಲ್ಲ. ಈ ಮೈಸೂರು ಪ್ರದೇಶ ಸೇರಿದಂತಹ ಕರ್ಣಾಟಕ ರಾಜ್ಯ ಇತ್ತು ಎಂದು ಭಾವಿಸುವುದಾದರೆ, ಆದು ಸರಿಯಲ್ಲ, ಹಾಗೆ ನೋಡಿದರೆ ವಿಜಯನಗರ ಸಾಮ್ರಾಜ್ಯ ವನ್ನು ಕರ್ಣಾಟಕ ರಾಜ್ಯವೆಂದು ಏಕೆ ಕರೆಯಲಿಲ್ಲ? ಅವರು ಏಕೆ ವಿಜಯನಗರ ಸಾಮ್ರಾಜ್ಯವೆಂದು ಕರೆದುಕೊಂಡು ಹೋದರು? ಈ ಒಂದು ದೃಷ್ಟಿಯಿಂದ ಹಿಂದಿನ ರಾಜರು ಕರ್ಣಾಟಕ ರಾಜ್ಯವೆಂದು ಏಕೆ ಕರೆಯಲಿಲ್ಲವೆಂದು ಗೊತ್ತಾಗಿಲ್ಲ. ಎರಡನೆಯದಾಗಿ ಈ ದಿವಸ ಕನ್ನಡ ಮಾತನಾಡತಕ್ಕ ಜನರು ಕನ್ನಡಿಗರಾಗುತ್ತಾರೆ. ಇನ್ನೊಂದು ವಾದ—ಹಿಂದೆ ನಾನು ಹೇಳಿದ ಹಾಗೆ ಎಸ್.ಆರ್.ಸಿ. ವರದಿ ಈ ಸಭೆಯ ಮುಂದೆ ಅಂಗೀಕಾರಕ್ಕೆ ಬಂದಾಗ ಒಂದು ರಾಜಕೀಯ ಚಾತುರ್ಯತೆಯನ್ನು ಮುಂದಿಟ್ಟು ಒಂದು ಮಾನಸಿಕವಾದ ಘರ್ಷಣೆಯಾಗುವುದನ್ನು ತಪ್ಪಿಸುವುದಕ್ಕಾಗಿ, ಒಂದು ರಾಜ್ಯ ಸೂತ್ರವನ್ನು ಮುಂದಿಟ್ಟು, ಮೈಸೂರು ಎಂದು ಮುಂದುವರಿಸಿಕೊಂಡು ಹೋಗುವುದು ಉತ್ತಮವೆಂದು ಈ ಮಾನ್ಯ ಸಭೆಯು ಒಂದು ತೀರ್ಮಾನಕ್ಕೆ ಬಂತು. ಈ ರಾಜ್ಯ ಸೂತ್ರಕ್ಕೆ ಹಿನ್ನೆಲೆ ಏನೆಂಬುದನ್ನು ನಾನು ನನ್ನ ಹಿಂದಿನ ಭಾಷಣದಲ್ಲಿ ತಿಳಿಸಿದ್ದೇನೆ, ಆಗ ಚರ್ಚೆ ವಿಪುಲವಾಗಿ ನಡೆದು ಒಬ್ಬರ ಮನಸ್ಸನ್ನು ಒಬ್ಬರು ನೋಯಿಸುವುದು ಬೇಡ, ಈಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಹಳೆಯ ಹೆಸರೇ ಮುಂದುವರಿಸಿಕೊಂಡು ಹೋಗುವುದು ಉತ್ತಮವೆಂದು ಈ ಸಭೆಯು ತೀರ್ಮಾನಕ್ಕೆ ಬಂತು, ಆ ರೆ ಈಗ ಆ ರಾಜ್ಯ ಸೂತ್ರವನ್ನು ಒಂದು ಕಡೆ ಒತ್ತಿಟ್ಟು, ಒಂದು ದೇಶದ ವಾತಾವರಣದಲ್ಲಿ, ಒಂದೊಂದು ರಾಜ್ಯದ ಹೆಸರು ಪುನರ್ ನಾಮಕರಣವಾಗುತ್ತಾ ಇರುವಾಗ ನಮ್ಮ ರಾಜ್ಯಕ್ಕೂ ಕೂಡ ಎಲ್ಲಾ ದೃಷ್ಟಿಯಿಂದಲೂ ಸೂಕ್ತವಾಗಿ ಕಂಡುಬಂದರೆ ಒಂದು ಹೊಸ ನಾಮಕರಣ ವನ್ನು ಮಾಡತಕ್ಕ ಅವಕಾಶ ಬಂದಿದೆ. ಆ ದೃಷ್ಟಿಯಿಂದ ನಾನು 'ಕನ್ನಡ ನಾಡು' ಎನ್ನತಕ್ಕಂತಹ ಶಬ್ದ ಬಹಳ ಸೂಕ್ತವಾಗಿ ಕಂಡು ಬಂದುದರಿಂದ ಆ ವಿಷಯವನ್ನು ತಮ್ಮ ಮುಂದಿಟ್ಟಿದ್ದೇವೆ. ಕೊನೆಯದಾಗಿ ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕಾಗಿದೆ. ಕೆಲವರಿಗೆ ಇಲ್ಲಿ ಕರ್ಣಾಟಕ ಎನ್ನ ತಕ್ಕಂತಹ ಶಬ್ದ ಪ್ರಿಯವಾಗಿದೆ. ಆದರೆ ಅವರು ಮರೆಯಬಾರದು—ಯಾರಿಗೆ ಕರ್ಣಾಟಕವೆಂಬ ಶಬ್ದ ಪ್ರಿಯವಾಗಿದೆಯೋ, ಅದು ಆಗಲೇಬೇಕೆಂಬ ಆಶೆ ಪಡುತ್ತಾರೋ, ಅದೇ ಪ್ರಮಾಣದಲ್ಲಿ ಮೈಸೂರು ಎನ್ನತಕ್ಕಂತಹ ಹೆಸರು ಕೂಡ ಅನೇಕರಿಗೆ ಪ್ರಿಯವಾಗಿದೆ. ನಾವು ರಾಜಕಾರಣಿಗಳು, ರಾಜಕೀಯದಲ್ಲಿರುವವರು ಒಂದು ಕೆಲಸವನ್ನು ಸಾಧನೆ ಮಾಡುವವರು, ಇಬ್ಬರ ಹಿತಾಸಕ್ತಿಗಳಿಗೂ ಒಂದು ಮಾರ್ಗವನ್ನು ಹುಡುಕಬೇಕಾಗಿದೆ. ನನ್ನ ಅಭಿಪ್ರಾಯದಲ್ಲಿ, ಒಂದು ಸಾಮಾನ್ಯ ಅಭಿಪ್ರಾಯ ದಲ್ಲಿ, ನೀವು ಹೆಚ್ಚು ನೊಂದುಕೊಳ್ಳುವುದು ಬೇಡ, ಎದುರು ಪಕ್ಷದವರಿಂದ ಈ ಹೆಸರನ್ನು ಹೇಳಿಸಿ ಹೋಯಿತು ಎಂದು ನಿಮಗೆ ಅದು ನೋವು ಉಂಟುಮಾಡುವುದೂ ಬೇಡ. ಉಭಯತ್ರರೂ ಒಂದು ರಾಜ ಸೂತ್ರವನ್ನು ಒಪ್ಪುವುದಾದರೆ, ಇಬ್ಬರಿಗೂ ಈ ರಾಜ ಸೂತ್ರ ಸೂಕ್ತವೆಂದು ಕಂಡು ಬರು ವುದಾದರೆ, ನಾವು ಕನ್ನಡ ಮಾತನಾಡತಕ್ಕ ಜನರು, ಕನ್ನಡನಾಡು ಎಂಬ ಹೆಸರನ್ನೇ ಇಡಬಹುದು. ಕನ್ನಡ ನಡೆ, ಕನ್ನಡ ನುಡಿ, ಕನ್ನಡ ಭೂಮಿ ಮುಂತಾದ ಕನ್ನಡವೆಂಬ ಮೂಲ ಶಬ್ದ ವಿರುವುದರಿಂದ ಈ ಹೆಸರಿಗೆ ಪ್ರಾಶಸ್ತ್ಯ ಇದೆ. ಆ ದೃಷ್ಟಿಯಿಂದ ನಮ್ಮ ಉಭಯತ್ರರಲ್ಲೂ ನೋವು ಉಂಟಾಗದ ರೀತಿಯಲ್ಲಿ, ಕನ್ನಡ ನಾಡು ಎನ್ನತಕ್ಕಂತ ಶಬ್ದ ನಮ್ಮ ರಾಜ್ಯಕ್ಕೆ ಉಚಿತವಾಗಿದೆ ಎಂಬ ವಾದವನ್ನು ತಮ್ಮ ಮುಂದಿಟ್ಟು ಮಾನ್ಯ ಸದಸ್ಯರೆಲ್ಲರೂ ನಮ್ಮ ರಾಜ್ಯಕ್ಕೆ ಕನ್ನಡ ನಾಡು ಎನ್ನತಕ್ಕಂತಹ ಹೆಸರನ್ನೇ ಒಪ್ಪಿಕೊಳ್ಳಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Leave of Absence to Sri B. T. Murnal

Mr. SPEAKER.—I call upon Sri Gurreddy to speak. But before he begins his speech, I have to put before the Hon'ble House one formal matter. I have received a letter from Sri B. T. Murnal, Member, Legislative Assembly, dated 15th January 1969 requesting under rule 188 for leave of absence from attending the current sittings of the Assembly due to his private work.

Is it the pleasure of the Assembly that permission be granted to Sri B. T. Murnal to remain absent from attending the current sittings of the Assembly ?

HON. MEMBERS.—Yes.

Mr. SPEAKER.—Permission to remain absent is granted.

Non-official Resolution *re*: change of name of Mysore State as "Kannada Nadu"

(Debate continued)

Sri B. P. GANGADHAR.—Sir, I want to move an amendment to the Resolution.

Mr. SPEAKER.—The hon. Member may move it.

Sri B. P. GANGADHAR.—Sir, I beg to move:

"In line 4, for the words 'Kannada Nadu' substitute the word 'Karnataka'."

Mr. SPEAKER.—Amendment moved :

"In line 4, for the words 'Kannada Nadu' substitute the word 'Karnataka'."

The members participating in this debate may proceed on the basis that the resolution along with the amendment is before the House for discussion.

Sri T. R. SHAMANNA. (Bangalore-Fort).—Sir, I have got an objection. The amendment moved completely changes the original resolution. Any amendment that is moved must not contradict the original resolution. This amendment contradicts the original resolution. I therefore object to the moving of this amendment and request that the amendment may be ruled out of order.

Mr. SPEAKER.—The point raised by the hon. Member Sri Shamanna is in the nature of a point of order. He says that the amendment should not be allowed. Now, it has been moved and so the objection is rather too late in the day. The amendment only seeks to substitute one word for another. So, there is no contradiction. The hon. Member Sri Shamanna can have his say and persuade the House not to accept the amendment.

Sri T. R. SHAMANNA.—I may be permitted to send another amendment.

Mr. SPEAKER.—I have no objection; he may do so.

Sri H. M. CHANNABASAPPA.—Sir, a wrong thing cannot be made right by acceptance. The amendment seeks to change the purpose of the main resolution; it has the effect of reversing the original resolution. Under the rule itself this is not permissible. Simply because it is permitted to be moved, it cannot have the effect of correcting the rule itself. Therefore, I beg to submit that the matter may be looked into by the Chair and a considered ruling given tomorrow.

Mr. SPEAKER.—I do not accept this proposition. I shall, however, bear in mind what the hon. Member has said. In the meanwhile, let the House proceed on the basis that the amendment is before the House.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ಎಲ್. ಶ್ರೀಕಂಠಯ್ಯನವರು ಈ ಸಭೆಯ ಮುಂದೆ ತಂದಂಥ ನಿರ್ಣಯವನ್ನು ನಾನು ಪೂರ್ಣವಾಗಿ ವಿರೋಧಿಸುತ್ತಾ, ಅದರಂತೆ ಕನ್ನಡ ನಾಡು ಎನ್ನುವ ಶಬ್ದಕ್ಕೆ ಶ್ರೀಮಾನ್ ಗಂಗಾಧರ್ ಅವರು ತಂದಿರತಕ್ಕಂಥ ತಿದ್ದುಪಡಿಯನ್ನು ನಾನು ಅನುಮೋದಿಸುತ್ತೇನೆ. ಶ್ರೀಮಾನ್ ಶ್ರೀಕಂಠಯ್ಯನವರು ಸುಮಾರು 1½–2 ತಾಸುಗಳಿಂದ ಸುದೀರ್ಘವಾಗಿ ಮೈಸೂರನ್ನು ಕನ್ನಡನಾಡು ಎಂದು ಏತಕ್ಕೆ ಕರೆಯಬೇಕು ಎಂಬುದನ್ನು ಹೇಳಿದ್ದಾರೆ. ಅವರು ಆರೀತಿ ಹೇಳಿರುವಾಗ ಒಂದೆರಡು ಮಾತುಗಳನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಕರ್ನಾಟಕ ಹರಿದು ಹಂಚಿಹೋದ ಸಮಯದಲ್ಲಿ ಕನ್ನಡ ಮಾತನಾಡುವ ಜನ ಮಹಾರಾಷ್ಟ್ರದಲ್ಲಿದ್ದರು. ಹೈದರಾಬಾದಿನಲ್ಲಿದ್ದರು. ತಮಿಳುನಾಡಿನಲ್ಲಿದ್ದರು. ತೆಲಂಗಾಣದಲ್ಲಿದ್ದರು. ಕನ್ನಡ ಭಾಷೆಯನ್ನಾಡುವ ಜನ ಒಂದು ರಾಜ್ಯದಲ್ಲಿ ಬರಬೇಕು ಆ ರಾಜ್ಯವನ್ನು 'ಕರ್ಣಾಟಕ' ಎಂದು ಕರೆಯಬೇಕು ಎಂದು ನಮ್ಮ ಜನತೆಯ ಆಸೆಯಾಗಿತ್ತು. ಕರ್ಣಾಟಕ ಎಂಬ ಶಬ್ದ ಯಾವ ಕಾಲಕ್ಕೂ ಇಲ್ಲ ಎನ್ನುವ ಧಾಟಿಯಲ್ಲಿ ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದ್ದಾರೆ. ನನಗಾದರೂ ಅನಿಸುತ್ತದೆ ಅವರು ಪ್ರೊಫೆಸರ್ ಇದ್ದಾರೆ. ಇತಿಹಾಸಗಳನ್ನೆಲ್ಲಾ ಅವರು ಚೆನ್ನಾಗಿ ಓದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇವೆ. ಕರ್ಣಾಟಕ ಎಂಬ ಹೆಸರು ಈಗ ಹುಟ್ಟಿದ್ದಲ್ಲ. ಅದು ಸಾವಿರಾರು ವರ್ಷಗಳಿಂದ ಇದೆ ಎಂಬುದನ್ನು ಇತಿಹಾಸ ಸಾರಿ ಸಾರಿ ಹೇಳುತ್ತದೆ. ನಮ್ಮ ಕರ್ಣಾಟಕದ ಇತಿಹಾಸವನ್ನು ನೋಡುವುದಾದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ನಮ್ಮ ರಾಜ್ಯ ಇತ್ತು ಎನ್ನುವಂಥಾದ್ದು ನಮಗೆ ಇತಿಹಾಸದಿಂದ ಕಂಡುಬರುತ್ತದೆ. ಅದರಲ್ಲಿಯೂ ಸಹ ಕರ್ನಾಟಕ ಎಂದು ಇದೆಯೇ ಹೊರತು ಕನ್ನಡ ನಾಡು ಎಂದು ಇಲ್ಲ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಇದು ಯಾವ ಇತಿಹಾಸದಲ್ಲಿದೆ ?

ಶ್ರೀ ಎಸ್. ಎಂ. ಗುರೆಡ್ಡಿ.—ಮಾನ್ಯ ಸದಸ್ಯರಾದ ಶ್ರೀ ದೇವರಾಜ ಅರಸ್ ಅವರು ರಾಜಮನೆತನದವರು. ಅವರು ಈ ವಿಷಯವನ್ನು ತಿಳಿದುಕೊಂಡಿದ್ದಾರೆಂದು ತಿಳಿಯುತ್ತೇನೆ. ಅವರು ಎಷ್ಟೋ ಸಲ ಕಾಶ್ಮೀರಕ್ಕೆ ಹೋಗಿ ಬಂದಿದ್ದಾರೆ. ಅವರು ಅಲ್ಲಿಯ ಹಳೆ ಕನ್ನಡದ ಲಿಪಿಯನ್ನ ಶಿಲಾಶಾಸನಗಳನ್ನು ನೋಡಿದರೆ ಅವರಿಗೆ ಆಗ ಅದು ಗೋಚರವಾಗುತ್ತದೆ. ಕರ್ನಾಟಕದ ಇತಿಹಾಸ ಆಗಿನ ಕಾಲಕ್ಕೂ ಪ್ರಸಿದ್ಧಿಯಾಗಿತ್ತು. ಇವೊತ್ತು ಈ ರಾಜ್ಯದ ಹೆಸರನ್ನು ಕರ್ಣಾಟಕ ಎಂದು ಕರೆಯುವುದಕ್ಕೆ ಐತಿಹಾಸಿಕವಾಗಿ ಏನು ಕಾರಣಗಳಿವೆ ಎಂಬುದನ್ನು ಸಾಕ್ಷಿ ಸಾಹಿತ್ಯ ಆಧಾರದ ಮೇಲೆ ನಾನು ಹೇಳುತ್ತೇನೆ. ವಿಜಯನಗರದ ರಾಜರು ಕೂಡ ಕರ್ಣಾಟಕದ ಸಿಂಹಾಸನಾಧೀಶ್ವರರಾಗಿದ್ದರು ವಿಜಯನಗರ ಕರ್ಣಾಟಕದ ರಾಜಧಾನಿ ಎಂದು ಕರೆಯಲ್ಪಟ್ಟಿತ್ತು. ಮೈಸೂರು ಮಹಾರಾಜರನ್ನು ಇಂದಿಗೂ ಕರ್ನಾಟಕ ರತ್ನಸಿಂಹಾಸನಾಧೀಶ್ವರ ಎಂದೇ ಕರೆಯಲಾಗುತ್ತಿದೆ. ಮೈಸೂರಿಗೆ ಹೊರಗಡೆಯಿಂದ ಬಂದವರೆ ಈ ರಾಜ್ಯಕ್ಕೆ ಕರ್ಣಾಟಕ ಎನ್ನುವ ಹೆಸರನ್ನು ಇಡಬೇಕು ಎಂದು ಹೇಳುತ್ತಿದ್ದಾರೆ ಎಂದು ತಾವು ಹೇಳಬಹುದು. ಅದು ಸರಿಯಲ್ಲ. ತಾವು ಕೇವಲ ಎಮೋಷನಲ್ ಆಗಿ ಒಂದು ಕಾಂಪ್ರಮೈಜ್ ಫಾರ್ಮುಲ ತಂದೊಡ್ಡಿದ್ದೀರಿ. ಕೆಲವು ಜನ ಈ ರಾಜ್ಯದ ಹೆಸರು ಕರ್ಣಾಟಕ ಎಂದು ಆಗಬೇಕೆಂದು ಕೇಳುತ್ತಿದ್ದಾರೆ, ಇನ್ನೂ ಕೆಲವರು ಮೈಸೂರು ಎನ್ನುವುದನ್ನು ಹೀಗೆಯೇ ಉಳಿಸಿಕೊಂಡು ಬರಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇಬ್ಬರ ನಡುವೆ ಶ್ರೀಮಾನ್

ಶ್ರೀಕಂಠಯ್ಯನವರು ಒಂದು ಫಾರ್ಮುಲವನ್ನು ತಂದು ಈ ರಾಜ್ಯದ ಹೆಸರನ್ನು ಕನ್ನಡ ನಾಡು ಎಂದು ಇಡಬೇಕೆಂದು ಅವರು ಹೇಳುತ್ತಿದ್ದಾರೆಂದು ನಾನು ಆಶೆ ಮಾಡಿಕೊಂಡಿದ್ದೇನೆ. ಅದಕ್ಕೆ ನನ್ನ ಆಕ್ಷೇಪಣೆ ಇಷ್ಟೆ.

5–00 P.M.

ಆದರೆ ಈ ಸಂದರ್ಭದಲ್ಲಿ ನಾವು ಕೂಡ ಸ್ವಲ್ಪ ವಿಚಾರ ಮಾಡಬೇಕಾಗಿದೆ. ಮೈಸೂರು ರಾಜ್ಯ ಒಂದುಗೂಡಿ ಇಲ್ಲಿಗೆ 10-12 ವರ್ಷಗಳಾಯಿತು. ಈ ಅವಧಿಯಲ್ಲಿ ನಮ್ಮಲ್ಲಿ ಎಷ್ಟು ಭಾವೈಕ್ಯತೆಯು ಮೊತ್ತ ಬೆಳೆಯಬೇಕಾಗಿತ್ತೋ ಆ ಒಂದು ಮೊತ್ತ ಬೆಳೆದಿಲ್ಲ. ಇದು ವಿಷಾದಕರ. ಈ ಭಾವನೆ ಬೆಳೆಯಬೇಕಾದರೆ ಈಗಿರುವ ಮೈಸೂರು ರಾಜ್ಯ ಎನ್ನುವುದನ್ನು ಕರ್ಣಾಟಕ ರಾಜ್ಯ ಎಂದು ಬದಲಾವಣೆ ಮಾಡಬೇಕು. ಈ ರೀತಿಯಾದರೆ ಮಾತ್ರ ಭಾವೈಕ್ಯತೆ ಸಾಧಿಸಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಈಗ ನಮ್ಮ ಹಿರಿಯ ಸದಸ್ಯರೊಬ್ಬರು ಹೇಳಿದರು, ಹೆಸರಿನಲ್ಲಿ ಏನಿದೆ, ಹೆಸರು ಏನು ಮಾಡುತ್ತದೆ, ಹೆಸರನ್ನು ಏನಾದರೂ ಬದಲಾವಣೆ ಮಾಡಿದರೆ ನಮ್ಮ ರಾಜ್ಯವೇನೂ ಶ್ರೀಮಂತ ರಾಜ್ಯವಾಗುವುದಿಲ್ಲ, ನೀರಾವರಿ ಪ್ರದೇಶಗಳು ಜಾಸ್ತಿಯಾಗಿ ದೇಶ ಸಮೃದ್ಧಿಯಾಗುವುದಿಲ್ಲ, ಕೈಗಾರಿಕೆಗಳು ಜಾಸ್ತಿಯಾಗುವುದಿಲ್ಲ ಎನ್ನತಕ್ಕಂಥ ಧಾಟಿಯಲ್ಲಿ ಹೇಳಿದರು, ಎಷ್ಟೋ ಜನ ಶ್ರೀಮಂತರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಸಿಕೊಂಡು ಇದ್ದಾರೆ. ಅಗರ್ಭ ಶ್ರೀಮಂತರಿದ್ದಾರೆ. ಆದರೂ ಸಹ ಅವರ ಮನಸ್ಸಿನಲ್ಲಿ ಸಮಾಧಾನ ತೃಪ್ತಿ ಇದೆ ಎಂದು ಹೇಳಲಿಕ್ಕೆ ಆಗುವುದಿಲ್ಲ, ಮನಸ್ಸಿನ ತೃಪ್ತಿ ಸಮಾಧಾನವೇ ಬೇರೆ ಜನರ ಮನಸ್ಸಿನ ತೃಪ್ತಿ ಹೆಚ್ಚಿಸಲು ಅವರ ಮನಸ್ಸಿನಲ್ಲಿ ಸಮಾಧಾನ ಒಳಮೂಡಬೇಕಾದರೆ ಕರ್ಣಾಟಕ ಎಂದು ಹೆಸರು ಬದಲಾವಣೆ ಮಾಡುವುದರಿಂದ ಮಾತ್ರ ಸಾಧ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಬೇರೆ ಬೇರೆ ಹೆಸರಿನಿಂದ ನಮ್ಮ ರಾಜ್ಯವನ್ನು ಕರೆದರೆ ಜನತೆಗೆ ಎರಡು ಬಗೆದಂತಾಗುತ್ತದೆಂದು, ಹೆಸರಿನಲ್ಲಿ ಏನಿದೆ ಎಂದುಕೊಂಡು ಇದೇ ರೀತಿ ಮುಂದುವರಿಸಿಕೊಂಡು ಹೋದರೆ ಒಳ್ಳೆಯದಾಗುವುದಿಲ್ಲ. ಹೆಸರನ್ನು ಬದಲಾವಣೆ ಮಾಡದೆ, ನಮ್ಮ ಜನರ ಮನಸ್ಸನ್ನು ಬೇರಾವ ರೀತಿಯಿಂದಲೂ ತೃಪ್ತಿ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತೇನೆ ಮದ್ರಾಸ್ ರಾಜ್ಯದವರು ತಮ್ಮ ರಾಜ್ಯದ ಹೆಸರನ್ನು ತಮಿಳು ನಾಡು ಎಂದು ಬದಲಾಯಿಸಿದರು, ಅದಕ್ಕೋಸ್ಕರ ನಮ್ಮ ರಾಜ್ಯದ ಹೆಸರನ್ನು ಕನ್ನಡ ನಾಡು ಎಂದು ಕರೆಯಬಹುದೆಂದು ಮಾನ್ಯ ಸದಸ್ಯರು ಹೇಳಿದರು. ಮದ್ರಾಸಿನಲ್ಲಿ ಅವರು ತಮಿಳನ್ನು ಮಾತನಾಡುತ್ತಿದ್ದರಿಂದ ಆ ರಾಜ್ಯಕ್ಕೆ ಮೊದಲಿನಿಂದಲೂ ಬೇರಾವ ಹೆಸರೂ ಇದ್ದಿದ್ದಿಲ್ಲ, ಅದು ಅಖಂಡ ತಮಿಳು ನಾಡಿನ ಜನತೆಯ ಪ್ರೇಮದ ಹೆಸರಾಗಿತ್ತು. ಕಾರಣ ಆ ರಾಜ್ಯಕ್ಕೆ "ತಮಿಳುನಾಡು" ಎಂದು ಮಾಡಿಕೊಂಡರು. ಮದ್ರಾಸ್ ರಾಜ್ಯ ಎಂಬುದು ಯಾವ ಕಾಲದಲ್ಲಿಯೂ ಇರಲಿಲ್ಲ. ಬ್ರಿಟಿಷರು ನಮ್ಮ ದೇಶಕ್ಕೆ ಬಂದನಂತರ ನಿರ್ಮಾಣವಾದಂಥ ರಾಜ್ಯ ಇದು. ನನಗೆ ತಿಳಿದಮಟ್ಟಿಗೆ ಮದ್ರಾಸ್ ರಾಜ್ಯಕ್ಕೆ ಮೂಲ ಇತಿಹಾಸದಲ್ಲಿ ಮದ್ರಾಸ್ ರಾಜ್ಯ ಎಂಬ ಹೆಸರೇ ಇದ್ದಿಲ್ಲ ಎಂದು ಹೇಳುತ್ತೇನೆ. ಒಂದೇ ಭಾಷೆ ಮಾತನಾಡುವ ಜನರು ಒಂದು ಕಡೆ ಸೇರಿ ತಮಿಳು ನಾಡು ಎಂದು ಕರೆಸಿಕೊಂಡರು. ಆದರೆ ನಮ್ಮ ಕರ್ಣಾಟಕದ ಇತಿಹಾಸ ಬೇರೆ. ಯಾವ ಇತಿಹಾಸ ಪುಸ್ತಕಗಳನ್ನು ತಿರುವಿ ಹಾಕಿದರೂ ಸಹ ಕನ್ನಡ ನಾಡಿನ ರಾಜ್ಯ ಎಂದು ಯಾವ ಕಡೆಯೂ ಹೇಳಿಲ್ಲ. ಮದ್ರಾಸ್ ರಾಜ್ಯದ ಹೆಸರನ್ನು ತಮಿಳು ನಾಡು ಎಂದು ಕರೆದ ಮೇಲೆ ನಮ್ಮ ರಾಜ್ಯದ ಹೆಸರನ್ನು ಸಹ ಕನ್ನಡ ನಾಡು ಎಂದು ಕರೆದರೆ ಸಾಕು ಎಂಬುದಾಗಿ ಲಘುವಾಗಿ ಹೇಳಿದರೆ ಆಗುವುದಿಲ್ಲ. ಹೆಸರಿನ ಬದಲಾವಣೆಯು ಸುಮ್ಮನಾಗಿ ಬಹಳ ವಿಚಾರ ಮಾಡಬೇಕಾಗಿದೆ. ಈಗ ಅಂತಹ ಒಂದು ಸಂದರ್ಭ ಕೂಡ ಬಂದಿದೆ. ಹೆಸರಿನ ಬದಲಾವಣೆ ಮಾಡುವುದಕ್ಕೆ ಇದು ಸರಿಯಾದ ಸಂದರ್ಭ, ಸರಿಯಾದ ಸಮಯ ಎಂದು ಎಲ್ಲರೂ ತಿಳಿದುಕೊಂಡಿದ್ದಾರೆ. ರಾಜ್ಯದ ಹೆಸರನ್ನು ಬದಲಾವಣೆ ಮಾಡದೆ ಇದೇ ಹೆಸರನ್ನು ಮುಂದುವರಿಸಿಕೊಂಡು ಹೋದರೆ ರಾಜ್ಯದ ಪ್ರಗತಿ ಕುಂಠಿತವಾಗಬಹುದು. ಆದ್ದರಿಂದ ಎಲ್ಲರೂ ಒಪ್ಪುವಂತಹ ಹೆಸರನ್ನು ರಾಜ್ಯಕ್ಕೆ ಇಟ್ಟು ರಾಜ್ಯಭಾರ ಮಾಡುವುದು ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ತಾವುಗಳು ತಮ್ಮ ಒಂದು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು, ಜನಸಾಮಾನ್ಯರ ಮನಸ್ಸು ಏನಿದೆ ಎಂಬುದನ್ನು ತಿಳಿದುಕೊಂಡು, ಈಗಿನ ಹೆಸರನ್ನು ಬದಲಾವಣೆ ಮಾಡುವ ಕಡೆಗೆ ತಮ್ಮ ಲಕ್ಷ್ಯ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇವತ್ತಿನ ದಿವಸ ನಮ್ಮ ಕರ್ನಾಟಕದ ಕನ್ನಡ ಕವಿಗಳು ಕೂಡ ಹೆಸರಿನ ಬದಲಾವಣೆಯಾಗಬೇಕೆಂದು ಮೊದಲಿನಿಂದಲೂ ಹೇಳುತ್ತಾ ಬಂದಿದ್ದಾರೆ. ಮಹಾಕವಿಗಳಾದ ಡಾ|| ಕೆ. ವಿ. ಪುಟ್ಟಪ್ಪನವರು ಸಹ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಬೇಕೆಂದು ಹೇಳಿದ್ದಾರೆ. ದೊಡ್ಡ ದೊಡ್ಡ ಸಾಹಿತಿಗಳು, ಕಲಾವಿದರುಗಳು ಸಹ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಬೇಕೆಂದು ಹೇಳುತ್ತಿದ್ದಾರೆ. ಆದರೆ ಈ ಹೆಸರಿನ ಬದಲಾವಣೆ ಕೆಲವೊಂದು ಕಾರಣ

(ಶ್ರೀ ಎಸ್. ಎಂ. ಗುರೆಡ್ಡಿ)

ಗಳಿಂದ ಮುಂದೆ ಹೋಗುತ್ತಿದೆ. ಇದಕ್ಕಾಗಿ ನಾವು ವಿಷಾದಿಸಬೇಕಾಗಿದೆ. ಈ ರಾಜ್ಯಕ್ಕೆ ಕನ್ನಡ ನಾಡು ಎಂದು ಹೆಸರಿಡಬೇಕೆಂದು ಶ್ರೀಮಾನ್ ಶ್ರೀಕಂಠಯ್ಯನವರು ಏನು ಒಂದು ನಿರ್ಣಯವನ್ನು ತಂದಿದ್ದಾರೆ, ಅದನ್ನು ವಾಪಸ್ ತೆಗೆದುಕೊಂಡು, ಶ್ರೀಮಾನ್ ಗಂಗಾಧರ್ ಅವರು ಇದೇ ನಿರ್ಣಯದ ಮೇಲೆ ಏನು ಒಂದು ತಿದ್ದುಪಡಿಯನ್ನು ತಂದಿದ್ದಾರೆ ಅದನ್ನು ಒಪ್ಪುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ. ಈಗಿನ ಹೆಸರು ಬದಲಾವಣೆಯಾಗಬೇಕು ಎಂಬ ಬಗ್ಗೆ ಸುಮಾರು ಒಂದೂವರೆ ಗಂಟೆ ಕಾಲ ಅವರು ತಮ್ಮ ಅಭಿಪ್ರಾಯವನ್ನು ಒತ್ತಿ ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದ ಗಳನ್ನು ಅರ್ಪಿಸುತ್ತೇನೆ. ಕರ್ನಾಟಕ ಎಂದು ಹೆಸರಿಡಬೇಕು ಎಂಬ ಬಗ್ಗೆ ಅವರ ಖಚಿತ ಅಭಿಪ್ರಾಯ ತಿಳಿಸಲಿಲ್ಲ. ಈಗಿನ ಹೆಸರಿನ ಬಗ್ಗೆ ಅವರೂ ಕೂಡ ಬೇಸರಪಟ್ಟಿದ್ದಾರೆ. ಅವರ ಭಾವನೆ ಎಷ್ಟರ ಮಟ್ಟಿಗೆ ಹೋಗಿದೆಯೆಂದರೆ ಎಲ್ಲರೂ ಒಂದು ಕಾಂಪ್ರಮೈಸ್‌ಗೆ ಬರುವುದು ಒಳ್ಳೆಯದು ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. 1956ರಲ್ಲಿ ವಿಶಾಲ ಮೈಸೂರು ರಾಜ್ಯ ನಿರ್ಮಾಣವಾದಾಗ ಆಗ ಇದ್ದ ರಾಜಕೀಯ ಕಾರಣಗಳು ಮತ್ತು ರಾಜಕೀಯ ಪರಿಸ್ಥಿತಿಯ ಒತ್ತಡಗಳ ಮೂಲಕ ಆಗಿನ ನಾಯಕರು ವಿಚಾರವಿನಿಮಯ ಮಾಡಿಕೊಂಡು ಈಗಿನ ಹೆಸರನ್ನೇ ಮುಂದುವರೆಸಬೇಕೆಂದು ತೀರ್ಮಾನಿಸಿದರು. ಅದನ್ನು ನಾನು ಒಪ್ಪುತ್ತೇನೆ. 1956ಕ್ಕೆ ಮುಂಚೆ, ಮುಂಬೈ ಕರ್ನಾಟಕ ಹೈದರಾಬಾದ್ ಕರ್ನಾಟಕದಲ್ಲಿ ಇದ್ದ ಕನ್ನಡ ಮಾತನಾಡುವ ಜನರ ಮನಸ್ಸಿನಲ್ಲಿ ಏನಿತ್ತೆಂದರೆ, ಕನ್ನಡ ಮಾತನಾಡುವ ಜನರೆಲ್ಲರೂ ಒಂದು ಕಡೆ ಸೇರದಿದ್ದರೆ ನಮ್ಮ ಪ್ರಗತಿಯಾಗುವುದಿಲ್ಲ, ನಮ್ಮ ರಾಜ್ಯದ ಪ್ರಗತಿಯಾಗುವುದಿಲ್ಲ, ಮೊದಲು ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು ಎಂದು ಕೊಂಡು ವಿಶಾಲ ಹೃದಯದಿಂದ ಒಪ್ಪಿಕೊಂಡಿದ್ದಾರೆ. ಈಗಿನ ಹೆಸರನ್ನೇ ಮುಂದುವರಿಸಿಕೊಂಡು ಹೋಗಬೇಕೆನ್ನುವ ಭಾವನೆ ಅವರಲ್ಲಿ ಆ ಕಾಲದಲ್ಲಿ ಇರಲಿಲ್ಲ. ನಾನು ತಮ್ಮನ್ನು ಕೇಳಿಕೊಳ್ಳುವುದು ಇಷ್ಟೆ: ನಮ್ಮ ದೇಶದಲ್ಲಿರುವ ಅನೇಕ ರಾಜ್ಯಗಳವರು ತಮ್ಮ ರಾಜ್ಯದ ಹೆಸರನ್ನು ವಾತಾವರಣಕ್ಕೆ ತಕ್ಕಂತೆ ಪರಿವರ್ತಿಸಿಕೊಂಡಿದ್ದಾರೆ. ಮುಂಬೈ ರಾಜ್ಯ ಮಹಾರಾಷ್ಟ್ರವಾಯಿತು. ಆ ರೀತಿ ಬದಲಾವಣೆಯಾದಾಗ ಅಲ್ಲಿಯೂ ಕೂಡ ಕೆಲವು ಜನರು ತಕರಾರು ಮಾಡಿದರು. ಕೊನೆಗೆ ಎಲ್ಲರೂ ಒಪ್ಪಿಕೊಂಡಮೇಲೆ ಮಹಾರಾಷ್ಟ್ರವಾಯಿತು. ಆದಕಾರಣ ಮಾನ್ಯ ಸದಸ್ಯರುಗಳಲ್ಲಿ ಹೆಸರಿನ ಬದಲಾವಣೆಯ ಬಗ್ಗೆ ಇರುವ ಅಭಿಪ್ರಾಯವನ್ನು ಖಂಡಿಸಿ, ಮೈಸೂರು ರಾಜ್ಯದ ಹೆಸರು ಕನ್ನಡ ನಾಡು ಎಂದು ಆಗಬೇಕು ಎಂಬ ಸಂಕುಚಿತ ಭಾವನೆಯನ್ನು ತೊರೆದು ಈ ರಾಜ್ಯಕ್ಕೆ ಒಂದು ವಿಶಾಲವಾದ ಹೆಸರನ್ನು ಕೊಡುವುದಕ್ಕೆ ಒಪ್ಪಬೇಕು. ಧಾರವಾಡ, ಬಿಜಾಪುರ, ಮೈಸೂರು, ಬೆಂಗಳೂರು ಎಂಬುದಾಗಿ ಒಂದು ಪಟ್ಟಣದ ಅಥವಾ ಒಂದು ಊರಿನ ಹೆಸರನ್ನು ಈ ರಾಜ್ಯಕ್ಕೆ ಕರೆಯುವುದು ಬೇಡ. ಎಲ್ಲರ ವಿಶಾಲ ಹೃದಯದಿಂದ ಬರುವ ಹೆಸರೆಂದರೆ ಕರ್ನಾಟಕ ಎಂದು. ಇದು ಎಲ್ಲರ ಮೆಚ್ಚುಗೆಗೆ ಪಾತ್ರವಾದ ಹೆಸರಾಗಿದೆ. ಈ ಹೆಸರಿಗೆ ಯಾರ ಅಭ್ಯಂತರವೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಹೆಸರನ್ನು ಇಡುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಒಮ್ಮತದಿಂದ ಬೆಂಬಲ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾನು ಕೇಳಿದ ಮಟ್ಟಿಗೆ ಈ ರಾಜ್ಯದ ಹೆಸರಿನ ಬಗ್ಗೆ ಕೆಲವು ಮಂದಿ ಸದಸ್ಯರು ಇದರ ಬಗ್ಗೆ ಹಿಂದೆಯೂ ಮಾತನಾಡಿದ್ದರು ಇನ್ನು ಮುಂದೂ ಇದರ ಬಗ್ಗೆ ಮಾತನಾಡಬಹುದು. ಹೆಸರಿನಲ್ಲಿ ಏನಿದೆ ಎಂದು ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಇಲ್ಲಿ ಹೇಳಿದರು.

Sri H. M. CHANNABASAPPA.—The Hon'ble Member does not seem to have understood what exactly I have said. He should not misinterpret and mislead the House. I take strong objection for his misleading the House. He can refer to me only after I speak and take a definite stand. What I said was: "you tell us what are the benefits by calling this State as 'Karnataka', what are the material benefits by calling it 'Knnada nadu', what are the difficulties if we have 'Mysore'?"

ಶ್ರೀ ಎಸ್. ಎಂ. ಗುರೆಡ್ಡಿ.—ಮಾನ್ಯ ಸದಸ್ಯರಾದ ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪ ನವರು ಕರ್ನಾಟಕ ರಾಜ್ಯಕ್ಕೆ ವಿರೋಧ ಇದ್ದಾರೆ ಹಾಗೂ ಕರ್ನಾಟಕ ಎನ್ನುವ ಹೆಸರಿಗೆ ವಿರೋಧ ವ್ಯಕ್ತ ಮಾಡುತ್ತಿದ್ದಾರೆ ಎಂದು ನಾನು ಇಲ್ಲಿ ಹೇಳಿಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದನ್ನು ಊಹಿಸಿ ಅಪಾರ್ಥ ಮಾಡಿಕೊಂಡು ಹೇಳುತ್ತಾರೆಂದು ತೋರುತ್ತೆ.

ನಾನು ಇಲ್ಲಿ ಹೇಳುತ್ತಿರುವುದು ಇಷ್ಟೆ: ಸುಖ ಸಂತೃಪ್ತಿಗಳು ಹೆಸರಿನಿಂದಲೇ ಬರಲಿಕ್ಕಿಲ್ಲ ಮಾನಸಿಕ ಸಂಪತ್ತು ಇದೆ ಮಾನಸಿಕ ಸಂತೋಷವಿದೆ, ಜನರ ಹೃದಯದಲ್ಲಿಯ ಸಂತೋಷವನ್ನು ತಿಳಿದು ಕೊಳ್ಳುವುದೂ ಕೂಡ ಮಹತ್ವದ್ದೇ ಆಗಿದೆ. ಕಾರಣ ಈ ಹಿನ್ನೆಲೆಯಲ್ಲಿ ರಾಜ್ಯದ ಹೆಸರನ್ನು ಪರಿವರ್ತನೆ ಮಾಡುವಾಗ ಇದನ್ನು ಸರಿಯಾಗಿ ಅವರು ಮಾಡಬೇಕು. ನಾವು ಪ್ರೇಮಕ್ಕಾಗಿ ಮನಸ್ಸಿನ ಸಂತೋಷಕ್ಕಾಗಿ ಮಕ್ಕಳಿಗೆ ಒಂದು ಪ್ರೇಮದ ಹೆಸರು ಇಡುತ್ತೇವೆ. ಹೆಸರಿನಲ್ಲೇನಿದೆ ಎಂದು ಬೇಕಾಗದ ಹೆಸರನ್ನು ಇಡುವುದಿಲ್ಲ "ಕರ್ಣಾಟಕ ರಾಜ್ಯ" ಎಂದು ಕರೆದಾಕ್ಷಣವೇ ಜನರೆಲ್ಲ ಎಲ್ಲ ಸಂಪತ್ ಸಮೃದ್ಧರಾಗುತ್ತಾರೆಂದು ನಾನು ಹೇಳುತ್ತಿಲ್ಲ. ಮೈಸೂರು ಎನ್ನುವುದು ಒಂದು ಚಿಕ್ಕ ರಾಜ್ಯವಾಗಿತ್ತು ಎನ್ನುವುದು ಹಿಂದಿನ ಇತಿಹಾಸಗಳಿಂದ ಗೊತ್ತಾಗುತ್ತದೆ. ಹಿಂದೆ ಇಂಡಿಯಾ ದೇಶದಲ್ಲಿ ಸುಮಾರು 70 ಸಂಸ್ಥಾನಗಳು ಇದ್ದವು ಇದರಲ್ಲಿ ಮೈಸೂರು ಕೂಡ ಒಂದು ಸಣ್ಣ ಸಂಸ್ಥಾನವಾಗಿತ್ತು. ಸಣ್ಣ ಸಂಸ್ಥಾನದ ಹೆಸರನ್ನೇ ಅದರಲ್ಲಿ ಒಂದು ಪಟ್ಟಣದ ಹೆಸರನ್ನೇ ಮುಂದೂರಿಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ ಸಮಂಜಸವಲ್ಲ ಎಂದು ಹೇಳಬಹುದು. ಇಂದು ಪರದೇಶಗಳಲ್ಲಿ ಮೈಸೂರು ರಾಜ್ಯದ ಬಗ್ಗೆ ಯಾವ ಅಭಿಪ್ರಾಯವಿದೆ ಎನ್ನುವುದು ನಮಗೆ ತಿಳಿದ ವಿಷಯವಾಗಿದೆ. ಹೊರ ದೇಶಗಳವರು ಇಲ್ಲಿಂದ ಹೋದ ಜನರ ಬಗ್ಗೆ ಏನು ಭಾವನೆ ಮಾಡಿ ಕೊಂಡಿದ್ದಾರೆ ಎಂದರೆ 'ಮೈಸೂರು' ಎಂದಕೂಡಲೇ ಒಂದು ಪಟ್ಟಣದ ಜನ ಬಂದಿದ್ದಾರೆ ಅಥವಾ ಒಂದು ಸಣ್ಣ ಪಟ್ಟಣದಲ್ಲಿ ಇದ್ದಂಥ ಜನ ಎಂಬ ಭಾವನೆ ಇದ್ದಂತೆ ನನಗೆ ತೋರುತ್ತದೆ. ಇದಕ್ಕೆ ಕರ್ಣಾಟಕ ಪ್ರಾಂತ ಎಂದು ಇದ್ದರೆ ಆಗ ಈ ರಾಜ್ಯಕ್ಕೆ ಒಂದು ರೀತಿಯಾದ ಗೌರವ ಬರುತ್ತದೆ. ನಮ್ಮ ಕರ್ಣಾಟಕ ಪ್ರಾಂತ ಆಗುವಾಗ ಬೇರೆ ಬೇರೆ ಕಡೆಗಳಲ್ಲಿ ಇದ್ದಂಥ ಪ್ರದೇಶಗಳು ಬಂದು ಸೇರಿರುವುದರಿಂದ ಇದನ್ನು ಒಂದು ವಿಶಾಲ ದೃಷ್ಟಿಯಿಂದ ನೋಡಬೇಕು ಒಟ್ಟಿನಲ್ಲಿ ಈ ರೆಸಲ್ಯೂಷನ್‌ನ್ನು ಅನುಮೋದಿಸಿರುವವರು ಹಳೆಯ ಕರ್ಣಾಟಕದ ಕಡೆಯಿಂದ ಬಂದವರು ಇದಕ್ಕಾಗಿ ಇವರು ಕರ್ಣಾಟಕ ಎಂಬ ಹೆಸರಿನ ಪ್ರಭಾವ ಬೀರಬೇಕು ಎಂದು ಹೇಳುತ್ತಿದ್ದಾರೆಂದು ತಿಳಿಯುದೆ, ಹಿಂದಿನಿಂದಲೂ ಕರ್ಣಾಟಕ ಎನ್ನುವ ಹೆಸರೇ ಇರಬೇಕು ಎಂದು ಹೇಳುತ್ತಾ ಬರುತ್ತಿರುವುದರಿಂದ ಇಂದು ಕೂಡ ಇದಕ್ಕೆ ಕರ್ಣಾಟಕ ಎಂದು ಹೆಸರು ಇಡುವುದು ಸೂಕ್ತ ಎಂದು ನಾನು ಇಲ್ಲಿ ಹೇಳುತ್ತೇನೆ. ಕರ್ಣಾಟಕ ಎಂದು ಹೆಸರು ಇಡುವುದರಲ್ಲಿ ಇಲ್ಲದ ಭೇದ ಭಾವನೆಗಳನ್ನು ತರುವುದು ಬೇಡ. ನಮ್ಮ ಕರ್ಣಾಟಕದ ಬಹು ಭಾಗಗಳು ಹರಿದು ಹಂಚಿ ಹೋಗಿದ್ದುದು ಇಂದು ಒಂದಾಗಿ ಒಂದೇ ರಾಜ್ಯದ ಆಡಳಿತದಲ್ಲಿ ಬಂದಿದೆ, ಇದಕ್ಕೆ ಮುಂಬೈ ಪ್ರಾಂತದ ಕೆಲವು ಭಾಗಗಳು ಹಾಗೂ ಹೈದರಾಬಾದು ಪ್ರಾಂತದ ಕೆಲವು ಭಾಗಗಳು ಹಾಗೂ ಇನ್ನಿತರ ಭಾಗಗಳು ಸೇರಿ ಒಂದೇ ರಾಜ್ಯವಾಗಿದೆ ಇದರಿಂದಾಗಿ ಇಂದು ಅಖಂಡ ಕರ್ಣಾಟಕ ರಾಜ್ಯ ನಿರ್ಮಾಣವಾಗಿದೆ. ಇಂದು ಇಂತಹ ರಾಜ್ಯಕ್ಕೆ ಎಲ್ಲ ಪ್ರದೇಶಗಳೂ ಬಂದು ಒಂದುಗೂಡಿರುವಾಗ ಇದಕ್ಕೆ ಕರ್ಣಾಟಕ ಎಂದು ಹೆಸರು ಇಡುವುದು ಸೂಕ್ತ ಎಂದು ನಾನು ಇಲ್ಲಿ ಒತ್ತಾಯ ಮಾಡುತ್ತೇನೆ. ಇವೊತ್ತಿನ ದಿವಸ ಇದರಲ್ಲಿ ಹಳೆಯ ಮೈಸೂರು ಪ್ರಾಂತದವರು ಹೆಸರಿನಲ್ಲೇನಿದೆ ಎಂದು ಕೇಳಬಹುದು. ಮೈಸೂರು ಎಂದು ಇದ್ದರೆ ಕೇಂದ್ರದವರ ಮೇಲೆ ಹೆಚ್ಚು ಪ್ರಭಾವ ಬೀರುವುದಕ್ಕೆ ಆಗುವುದಿಲ್ಲ ಎಂದು ಹೇಳುವುದು ಅಷ್ಟು ಸಮಂಜಸವಲ್ಲ. ಮೈಸೂರು ಎಂದು ಕರಿಸಿಕೊಳ್ಳುವುದು ಇಲ್ಲಿನ ಜನಕ್ಕೆ ಪ್ರಿಯವಾಗಿದೆ ಎಂದು ಕರ್ಣಾಟಕ ಎಂದು ಕರೆದರೆ ಆ ಹೆಸರಿನ ಪ್ರಭಾವ ಹೇಗೆ ಹೆಚ್ಚಾಗುತ್ತದೆ, ಏನು ಅವಕಾಶಗಳಿವೆ ಎಂದು ಕೇಳಬಹುದು. ಕರ್ಣಾಟಕ ಎನ್ನುವ ಹೆಸರಿಗೆ ಇತಿಹಾಸ ಪರಂಪರೆಗಳು ಇವೆ. ಆದರೆ ಮೈಸೂರು ಎನ್ನುವ ಹೆಸರಿಗೆ ಅಂತಹ ಪರಂಪರೆಗಳಿಲ್ಲ. ಹಾಗಿದ್ದರೂ ಇಂತಹ ಹೆಸರನ್ನು ಉಳಿಸಿಕೊಂಡು ಬರಬೇಕು ಎನ್ನುವ ಹಂಬಲದಿಂದ ಹೇಳುತ್ತಿದ್ದಾರೆ. ಈಗ ಮೈಸೂರು, ಕರ್ಣಾಟಕ, ಕನ್ನಡನಾಡು ಹೀಗೆ ಮೂರು ಹೆಸರುಗಳು ಕೇಳಿ ಬರುತ್ತಿವೆ. ಕೆಲವರು ಮೈಸೂರು ಎನ್ನುವ ಹೆಸರನ್ನೇ ಮುಂದುವರಿಸಿಕೊಂಡು ಬರಬೇಕು ಎಂದೂ ಕೆಲವರು ಕರ್ಣಾಟಕ ಎಂದು ಹೆಸರು ಕರೆಯಬೇಕು, ಕನ್ನಡನಾಡು ಎಂದು ಕೆಲವರು ಹೇಳುತ್ತಾರೆ. "ಕನ್ನಡ ನಾಡು" ಎಂದು ಕರೆಯಬೇಕೆಂದು ಹೊಸದಾಗಿ ತಂದಿದ್ದಾರೆ ಮತ್ತು ಈ ರೆಸಲ್ಯೂಷನ್‌ನನ್ನು ಹೀಗೆ ತರುವುದರಲ್ಲಿ ಏನೂ ಬೆಲೆ ಇಲ್ಲ. ಇದು ಅಷ್ಟು ಉಚಿತವೂ ಅಲ್ಲ. ಏಕೆಂದರೆ ಕನ್ನಡನಾಡು ಎಂದು ಎಲ್ಲೂ ಬಂದಿಲ್ಲ. ಕನ್ನಡ ಭಾಷೆ ಎಂದರೆ ಒಂದು ನಾಡಾಗುವುದಿಲ್ಲ. ಕರ್ಣಾಟಕದಲ್ಲಿ ಕನ್ನಡ ಭಾಷೆಯಾಡುವ ಜನರಿದ್ದಾರೆ. ಅಲ್ಲದೆ ಕನ್ನಡ ಭಾಷೆ ಮಾತನಾಡದೇ ಇರುವವರೂ ಇದ್ದಾರೆ. ಅನ್ಯ ಭಾಷೆಗಳನ್ನು ಮಾತನಾಡುವವರ ಮೇಲೆ ಒತ್ತಾಯ ತಂದು ಕೆಲಸ ಮಾಡುತ್ತೇವೆ ಎನ್ನುವ ಭಾವನೆ ಸರಿಯಾದುದಲ್ಲ.

ಅದಕ್ಕಾಗಿ ನಾನು ಹೇಳುವುದು ಏನೆಂದರೆ ಭಾಷಾವಾರು ಪ್ರಾಂತ ರಚನೆಯಾಬೇಕಾದರೆ ಕೇವಲ ಒಂದೇ ಭಾಷೆ ಆಡುವಂಥ ಜನ ಒತ್ತಟ್ಟಿಗೆ ಸೇರಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾನಾ ಭಾಷೆ ಆಡುವ ಜನ ಇದ್ದಾರೆ. ಆ ಅಲ್ಪ ಭಾಷಾಕಾರರ ಮನಸ್ಸಿನ ಮೇಲೆ ಒತ್ತಡ

(ಶ್ರೀ ಎಸ್. ಎಂ. ಗುರೆಡ್ಡಿ)

ತಂದಂತಾಗುತ್ತದೆ. ಆದುದರಿಂದ ಕರ್ನಾಟಕ ರಾಜ್ಯಕ್ಕೆ ಕನ್ನಡನಾಡು ಎನ್ನುವ ಹೆಸರನ್ನು ಇಡುವುದು ಅಷ್ಟು ಸಮರ್ಪಕವಾಗಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ನಮ್ಮ ರಾಜ್ಯದಲ್ಲಿ ಮುಂಬಯಿ ಕರ್ನಾಟಕದಲ್ಲಿ, ಹೈದ್ರಾಬಾದ್ ಕರ್ನಾಟಕದಲ್ಲಿ ಕನ್ನಡ ಮಾತನಾಡತಕ್ಕಂಥ ಜನ ಇದ್ದಾರೆ. ಅವರು ಕನ್ನಡನಾಡು ಆಗಬೇಕು ಎಂದು ಹೇಳಿದರೋ, ಅಥವಾ ಮೈಸೂರು ಭಾಗದಲ್ಲಿರುವ ಕರ್ನಾಟಕ ಜನ ಒಂದುಗೂಡಿ ಕನ್ನಡನಾಡು ಆಗಬೇಕು ಎಂದು ಹೇಳಿದರೋ ?

ಶ್ರೀ ಎಸ್. ಎಂ. ಗುರೆಡ್ಡಿ.—ಕನ್ನಡ ಮಾತಾಡುವ ಜನ ಒತ್ತಟ್ಟಿಗೆ, ಒಂದು ರಾಜ್ಯದ ಕೆಳಗೆ ಬರಬೇಕು, ಕನ್ನಡ ಮಾತನಾಡುವ ಜನರಿಗೆ, ತಮ್ಮದೇ ಆದ ಒಂದು ರಾಜ್ಯ ಬೇಕು, ಅದೂ ಕೂಡ "ಕರ್ನಾಟಕ" ಎಂಬ ಹೆಸರಿನ ರಾಜ್ಯ ಎಂಬ ಭಾವನೆ ಇತ್ತೇ ಹೊರತು ಅವರಲ್ಲಿ ಬೇರಾವ ಹೆಸರಿನ ಕಲ್ಪನೆ ಇದ್ದಿದ್ದಿಲ್ಲ ಎಂದು ಹೇಳುತ್ತೇನೆ. ಇವೊತ್ತು ಮುಂಬಯಿಯಲ್ಲಿ 2–3 ಲಕ್ಷ ಜನ ಇದ್ದಾರೆ. ಅವರು ನಾವು ಕನ್ನಡ ಮಾತನಾಡುವ ಜನ ಎಂದು ಹೇಳುತ್ತಾರೆಯೇ ವಿನಃ ಕನ್ನಡನಾಡಿನ ಜನ ಎನ್ನುವ ಭಾವನೆ ಅವರಲ್ಲಿಲ್ಲ. ಆದುದರಿಂದ ಅವರು ಕರ್ನಾಟಕ ಜನ ಆಗುತ್ತಾರೆ. ಮಾನ್ಯ ಸದಸ್ಯರಾದ ಶ್ರೀಕಂಠಯ್ಯನವರು ಕವಿಗಳಾಗಿದ್ದರಂತೆ, ಪ್ರೊಫೆಸರ್ ಆಗಿದ್ದಾರೆ ಆದರೆ ಅವರು ಕರ್ನಾಟಕ ಎನ್ನುವ ಹೆಸರಿಗೆ ವಿರೋಧವಾಗಿಲ್ಲ ಎಂದು ನಾನು ಧೈರ್ಯದಿಂದ ಹೇಳಬೇಕಾಗಿದೆ. ಅವರು ಯಾವ ಇತಿಹಾಸದ ಪುಟಗಳನ್ನು ತಿರುಗಿ ತಿರುಗಿ ಹಾಕಿ ನೋಡಿದರೂ ಕನ್ನಡನಾಡು ಎಂದು ಕಂಡು ಬರುವುದಿಲ್ಲ. ಒಮ್ಮೆ ಕರ್ನಾಟಕ ಎಂದು ಹೆಸರನ್ನು ರಾಜ್ಯಕ್ಕೆ ಕರೆದರೆ ಕೆಲವು ಜನರ ಭಾವನೆ ಬೇರೆಯಾಗಬಹುದು ಅದಕ್ಕಾಗಿ ಈ ಒಂದು ರೆಸಲ್ಯೂಷನ್ ತಂದಿದ್ದಾರೆಯೇ ವಿನಃ ಕನ್ನಡ ನಾಡು ಎನ್ನುವ ಹೆಸರು ಅವರ ಮನಸ್ಸಿನಲ್ಲಿ ಇಲ್ಲವೆಂದು ಹೇಳುತ್ತೇನೆ. ಎಲ್ಲ ಭಾಗಗಳು ಎಲ್ಲ ರೀತಿಯಿಂದಲೂ ಬೆಳವಣಿಗೆಯಾಗಬೇಕು ಎನ್ನುವ ಭಾವನೆ ಜನತೆಯ ಮನಸ್ಸಿನಲ್ಲೂ ಇದೆ ಮತ್ತು ಎಲ್ಲರ ದೃಷ್ಟಿಯಿಂದಲೂ ಇದು ಆಗಬೇಕಾದ್ದು ಸರಿ. ಇಂದು ಏನಾಗಿದೆ ಹೈದರಾಬಾದ್ ಕರ್ನಾಟಕದಿಂದ ಬಂದಂಥವರು ನಮ್ಮಲ್ಲಿ ಬೆಳವಣಿಗೆ ಆಗಿಲ್ಲ, ಮುಂಬೈ ಕರ್ನಾಟಕ ಪ್ರಾಂತದಿಂದ ಬಂದಂಥವರು ನಮ್ಮಲ್ಲಿ ಬೆಳವಣಿಗೆ ಆಗಿಲ್ಲ, ಹಳೆ ಮೈಸೂರಿನಲ್ಲಿ ಬೆಳವಣಿಗೆ ಆಗುತ್ತಾ ಇದೆ ಎನ್ನುವ ಧಾಟಿಯಲ್ಲಿ ಕೆಲವರು ಮಾತು ಮೇಲಿಂದ ಮೇಲೆ ಕೇಳಿ ಬರುತ್ತಿದೆ. ಇನ್ನೂ ಸ್ವಲ್ಪ ಮಟ್ಟಿಗೆ ಭಾವೈಕ್ಯತೆಯನ್ನು ಸಾಧಿಸಬೇಕಾಗಿದೆ ಎಂದು ಆಶಿಸುತ್ತೇನೆ. ಅದು ಆಗಬೇಕಾದರೆ ಕರ್ನಾಟಕ ಎನ್ನುವ ಹೆಸರನ್ನು ಇಟ್ಟಾಗ ಸಾಧ್ಯ. ಆ ಪ್ರಾಂತದಿಂದ ಬಂದಂಥವರು ಈ ಪ್ರಾಂತ ಬೆಳವಣಿಗೆ ಆಯಿತು, ನಮ್ಮ ಪ್ರಾಂತ ಬೆಳವಣಿಗೆ ಆಗಿಲ್ಲ ಎನ್ನುವ ಮಾತುಗಳೆಲ್ಲಾ ಮಾಯವಾಗುತ್ತದೆ. ಆದುದರಿಂದ ನಮ್ಮಲ್ಲಿ ವಿಶಾಲ ಮನೋಭಾವನೆ ಬೆಳೆಯದೆ ಎಲ್ಲ ಜನರ ಹಿತರಕ್ಷಣೆ ಸಾಧ್ಯವಿಲ್ಲ, ಕಾರಣ ಆ ವಿಷಯದ ಕಡೆಗೆ ಲಕ್ಷ ವಹಿಸಬೇಕಾಗಿದೆ, ಪ್ರತಿಯೊಂದೂ ನಾವು ಹೇಳಿದಂತೆ ಆಗಬೇಕು ಎನ್ನುವ ಮನೋಭಾವನೆ ಯಾರಲ್ಲಿ ಇರಬಾರದು, ಆ ಭಾವನೆ ಬಿಟ್ಟು ಎಲ್ಲರ ಮನಸ್ಸಿಗೆ ಮೆಚ್ಚಿಗೆಯಾದಂಥ ಹೆಸರನ್ನು ಕರೆಯಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

5–30 P.M.

ಸ್ವಾಮಿ, ನಾನು ಮಾನ್ಯ ಸದಸ್ಯರಾದ ಶ್ರೀಕಂಠಯ್ಯನವರನ್ನು ಕೇಳಿಕೊಳ್ಳುವುದು ಏನೆಂದರೆ ಮಾನ್ಯ ಸದಸ್ಯರಾದ ಗಂಗಾಧರ್ ಅವರು ತಂದಂಥ ತಿದ್ದುಪಡಿಯನ್ನು ಅವರು ಒಪ್ಪಿಕೊಳ್ಳಬೇಕು. ಮಾನ್ಯ ಸದಸ್ಯರು ತಂದಂಥ ನಿರ್ಣಯದ ಹಿನ್ನೆಲೆ ಸರಿಯಾಗಿದ್ದರೂ ಕೂಡ ಆ ಶಬ್ದ ಸರಿಯಾಗಿಲ್ಲ; ಕನ್ನಡ ನಾಡು ಎನ್ನುವಂಥದ್ದು ಜನರ ಮೆಚ್ಚುಗೆಗೆ ಪಾತ್ರವಾಗಿಲ್ಲ. ಆದಕಾರಣ ಅದನ್ನು ಅವರು ವಾಪಸು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು, ತಮಗೆ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—As per rules, the members participating in the debate should not take more than 15 minutes. It is better to regulate time, so that it may be possible to give opportunity to all the hon'ble Members who want to participate in the Debate. If all the members want to participate, I think, only 10 minutes will have to be given to each member

SRI H. M. CHANNABASAPPA.—Sometimes it may not be possible to confine ourselves within 10 minutes. The mover has taken some hours. Some members are very eager to participate and they may exceed the time limit of 10 minutes. Even if the time limit of 15 minutes is given, it may not be possible for them to express their views within that time.

MR. SPEAKER.—But the rule says only 15 minutes. It would not be difficult for parliamentarians of stature of the Hon'ble Member to finish within 10 or 15 minutes.

SRI D. DEVARAJ URS.—The Speaker may show some latitude wherever there is need for it.

SRI H. M. CHANNABASAPPA.—Has the suggestion of Mr. Devarj Urs been agreed to? I believe the powers of the Speaker are not limited. Since there are a good number of people to participate in the debate, some latitude might be shown.

MR. SPEAKER.—The Committee on Private Members' Bills and Resolutions has allotted only 3 hours for this. But anyway it is up to the House to decide. Is it the pleasure of the House to allot more time for this resolution.

HON'BLE MEMBERS.—Yes.

MR. SPEAKER.—More time is allotted for this resolution. But 15 minutes time limit is there.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಇದು ಬಹಳ ಮುಖ್ಯವಾದ ವಿಷಯ. ಈ ವಿಷಯ ಆಗಿಂದಾಗ್ಗೆ ಎಷ್ಟೋ ಸಲ ಚರ್ಚೆಯಾಗಿ ಚರ್ಚೆಯಲ್ಲಿಯೇ ಮುಕ್ತಾಯವಾಗಿದೆ. ಈ ಸಾರಿ ಒಂದು ತೀರ್ಮಾನಕ್ಕೆ ಬರುವಂಥ ಸೂಚನೆಗಳು ಮುಖ್ಯಮಂತ್ರಿಯವರ ಹೇಳಿಕೆಯಿಂದ, ಶ್ರೀಮಾನ್ ನಿಜಲಿಂಗಪ್ಪನವರ ಹೇಳಿಕೆಯಿಂದ ಕಂಡುಬರುತ್ತಿದೆ. ಅಂಥ ತೀರ್ಮಾನ ತೆಗೆದುಕೊಳ್ಳುವಂಥ ಪರಿಸ್ಥಿತಿಗೆ ಬಂದರೆ ಇದರ ಮೇಲೆ ಪೂರ್ಣ ಚರ್ಚೆಗೆ ಅವಕಾಶ ಕೊಡಬೇಕು. ಸದಸ್ಯರ ಭಾಷಣವನ್ನು 15 ನಿಮಿಷಗಳಿಗೆ ಮಿತಿಗೊಳಿಸುವುದಕ್ಕಾಗುವುದಿಲ್ಲ ಎಂದು ನನ್ನ ನಮ್ರ ಸೂಚನೆ. ಈ ನಿರ್ಣಯವನ್ನು ಮಾನ್ಯ ಸದಸ್ಯರಾದ ಎಲ್. ಶ್ರೀಕಂಠಯ್ಯನವರು ಮಂಡಿಸಿ ಅದರ ಮೇಲೆ ಎರಡೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ. ಅದೇ ಧಾಟಿಯಲ್ಲಿ ಮಾತನಾಡುವವರು, ಅಷ್ಟು ಹೊತ್ತು ಮಾತನಾಡುವವರು, ಅದಕ್ಕೆ ವಿರೋಧವಾದ ವಾದವನ್ನು ಹೂಡುವವರು ಈ ಸಭೆಯಲ್ಲಿ ಇದ್ದಾರೆಂದು ನಾನು ಮನಗಂಡಿದ್ದೇನೆ. ಆದುದರಿಂದ ಇದರ ಮೇಲಿನ ಚರ್ಚೆಗೆ ಪೂರ್ಣ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ಪ್ರತಿಯೊಬ್ಬರಿಗೂ ಒಂದೊಂದು ಗಂಟೆ ಅವಕಾಶ ಕೊಟ್ಟರೆ ತಿಂಗಳುಗಟ್ಟಲೆ ಕೊಡಬೇಕಾಗುತ್ತದೆ. ಅದು ಸಾಧುವಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ರಾಜ್ಯದ ಹೆಸರನ್ನು ಬದಲಾಯಿಸುವುದು ಮೂಲಭೂತವಾದ ಪ್ರಶ್ನೆ. ಅಷ್ಟು ಸುಲಭದಲ್ಲಿ ಇದನ್ನು ಡಿಸ್‌ಪೋಸ್ ಆಫ್ ಮಾಡುವುದು ಒಳ್ಳೆಯದಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳದೆ ಹೋದರೆ ಭಾರಿ ತಪ್ಪಾಗುತ್ತದೆ.

SRI H. M. CHANNABASAPPA.—Sir, reiterating my arguments I would like to submit that the Chair has got the discretion to extend the time. Sir, as this is a very important matter, the members might like to influence through their speeches either this side or that side. Also as Sri Hutchamasti Gowda puts it, it may take the course of a decision in

(SRI H. M. CHANNABASAPPA)

this matter during this session. Under these circumstances it should not be taken lightly either by the Chair or by any other member. This matter is of vital importance and has been agitating the minds of the millions of the people of the State. Hence I request that the hon'ble Chair to exercise its special powers and see that sufficient time is given to as many members as possible. Hence, I appeal to you Sir, that this should not be hastened through.

MR. SPEAKER.—As far as I am concerned, I consider every matter as very important. Secondly, though I have got the discretion to extend the time limit there should be some valid reasons for that. The hon'ble Members Sri Channabasappa and Sri Hutchamasti Gowda suggested that this is a very important matter and time should be extended. Though I have the power, it should not be an unlimited power. At the same time the hon'ble Members should see that the time at the disposal of the House is limited. Therefore limitation must always be there. We cannot avoid it. One of the greatest politicians has said that if he is asked to speak for five minutes he would require a week's time for preparation but if he is asked to speak for hours he can speak without any preparation.

SRI H. M. CHANNABASAPPA.—That may be possible for men of your experience.

MR. SPEAKER.—I know all the hon'ble Members are able to speak, except myself. Next speaker will be Sri Shamanna.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ಇದು ಬಹಳ ಮುಖ್ಯವಾದ ವಿಚಾರ. ಇದನ್ನು ಈ ವಿಧಾನಸಭೆಯಲ್ಲಿ ಈಗ ಚರ್ಚೆ ಮಾಡುವುದು ಅಷ್ಟು ಸೂಕ್ತವಾದುದಲ್ಲ ಎನ್ನುವುದು ನನ್ನ ಮೊದಲನೆಯ ವಿಚಾರ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾದರೆ ಚುನಾವಣೆಗಳಿಗೆ ಮುಂಚೆ ತೆಗೆದುಕೊಳ್ಳಬೇಕು. ಏಕೆಂದರೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ. ಪ್ರಜೆಗಳು ತಮ್ಮ ಅಭಿಪ್ರಾಯವನ್ನು ಇದರ ಬಗ್ಗೆ ಕೊಡುವುದಕ್ಕೆ ಒಂದು ಅವಕಾಶವಿರಬೇಕು. ಆದುದರಿಂದ ಸಾರ್ವತ್ರಿಕ ಚುನಾವಣೆಗಳಿಗೆ ಮುಂಚೆ ಈ ವಿಷಯವನ್ನು ಜನಗಳ ಮುಂದೆ ಇಟ್ಟು, ರಾಜ್ಯದ ಹೆಸರನ್ನು ಬದಲಾವಣೆ ಮಾಡಬೇಕೇ, ಬೇಡವೇ ಎನ್ನುವುದರ ಬಗ್ಗೆ ಜನಗಳು ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು ನಾವು ಈಗ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಾರದು. ಎಲೆಕ್ಟೊರೇಟ್ ಮುಂದೆ ಈ ವಿಷಯ ಬರಬೇಕು ಎನ್ನುವುದೇ ನನ್ನ ಮೊದಲನೆಯ ವಾದ.

ಶ್ರೀ ಎಂ. ಎಸ್. ಕೃಷ್ಣನ್.—ಕರ್ಣಾಟಕ ಎನ್ನುವ ಹೆಸರಿಡಲು ಜನಗಳು ಒಪ್ಪಿದರೆ ಮಾನ್ಯ ಸದಸ್ಯರು ರಾಜಿನಾಮೆ ಕೊಡುತ್ತಾರೆಯೇ ಸ್ವಾಮಿ ?

ಶ್ರೀ ಟಿ. ಆರ್. ಶಾಮಣ್ಣ.—ಮೊದಲನೆಯದಾಗಿ ಈ ನಿರ್ಣಯ ಬಂದಿರತಕ್ಕದು, ಈ ನಿರ್ಣಯದ ಮೇಲೆ ಬಂದಿರತಕ್ಕ ತಿದ್ದುಪಡಿಗಳು ಏನಿವೆಯೋ ಅದು ಅಷ್ಟು ಸೂಕ್ತವಾದುದಲ್ಲ ಎನ್ನುವುದು ನನ್ನ ವಾದ. ಏಕೆಂದರೆ ಕನ್ನಡ ನಾಡು ಅಥವಾ ಕರ್ಣಾಟಕ ಎಂದು ಅನ್ನುವುದಕ್ಕೆ ಮುಂಚೆ ನಾವು ಕನ್ನಡಿಗರಾಗುವುದಕ್ಕೆ ಪ್ರಯತ್ನಪಟ್ಟಿಲ್ಲ. ಕನ್ನಡ ರಾಜ್ಯದಲ್ಲಿ ಆಡಳಿತ ಭಾಷೆ ಕನ್ನಡ ಆಗಿಲ್ಲ, ಕನ್ನಡವನ್ನು ಸರಿಯಾಗಿ ಕಲಿಸುವುದಕ್ಕೆ ನಾವು ಪ್ರಯತ್ನಪಟ್ಟಿಲ್ಲ. ಆದರೆ ಹೆಸರಿಗೆ ಕಿತ್ತಾಡುವುದಕ್ಕೆ ಪ್ರಯತ್ನಪಡುತ್ತಿದ್ದೇವೆ.

ಕರ್ಣಾಟಕ ಎಂದು ಹೇಳತಕ್ಕ ವಾದವನ್ನು ಹೂಡುವುದಕ್ಕೆ ಮುಂಚೆ ಈ ವಿಶಾಲ ಮೈಸೂರಾದ ಮೇಲೆ ಯಾವ ಯಾವ ಸೌಭಾಗ್ಯವನ್ನು ಮೈಸೂರುದೇಶಕ್ಕೆ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಒಂದು ಪಟ್ಟಿ ಮಾಡಿಕೊಟ್ಟಿದ್ದರೆ ಚೆನ್ನಾಗಿತ್ತು. ನಮ್ಮ ಹಳೇ ಮೈಸೂರಿನ ನೌಕರರು ಕಣ್ಣಿನಲ್ಲಿ ನೀರಿಡುತ್ತಿದ್ದಾರೆ, ಏಕೆ ಈ ಕರ್ಣಾಟಕವಾಯಿತು ಎಂದು. ಈಗ ಸಂಬಳ ಸಾರಿಗೆ ಬಗ್ಗೆ, ಅವರ ಸ್ಥಾನ

ಮಾನಗಳ ಬಗ್ಗೆ ನೊಂದುಕೊಂಡು ಕೋರ್ಟಿಗೆ ಹೋಗುವುದಕ್ಕೆ ಶಕ್ತಿ ಇಲ್ಲದೆ ಬಹಳ ವ್ಯಸನಪಡುತ್ತಿರತಕ್ಕ ಈ ಸಂದರ್ಭದಲ್ಲಿ, ಅವರ ಗೋಳು ಯಾವತ್ತಿಗೂ ಮುಟ್ಟುತ್ತದೆ.

ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಪಾಯಿಂಟ್ ಆಫ್ ಆರ್ಡರ್, ಸ್ವಾಮಿ. ರೆಸಲ್ಯೂಷನ್ ಇರುವುದೇ ಬೇರೆ. ಈ ಕಾಲಕ್ಕೆ ರಾಜ್ಯದ ಹೆಸರನ್ನು ಬದಲಾವಣೆ ಮಾಡುವುದು ಯೋಗ್ಯವೋ, ಅಯೋಗ್ಯವೋ ಎನ್ನುವುದು ಸಮಂಜಸವಾಗುವುದಿಲ್ಲ.

Mr. SPEAKER.—I am just watching. Let me see whether he comes to the subject proper.

ಶ್ರೀ ಟಿ. ಆರ್. ಶಾಮಣ್ಣ.—ನಿರ್ಣಯವನ್ನು ತಂದಿರುವುದು ನ್ಯಾಯವಲ್ಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ಗ್ರಾಮಾಂತರ).—1972ರಲ್ಲಿ ಚುನಾವಣೆಗಳು ಆಗುವತನಕ ಹೀಗೆಯೇ ನಡೆಯಬೇಕು ಎಂದು ಹೇಳಿದಹಾಗಾಯಿತಲ್ಲವೇ, ಸ್ವಾಮಿ ?

ಶ್ರೀ ಎಂ. ಎಸ್. ಕೃಷ್ಣನ್.—ನಿರ್ಣಯವನ್ನು ತಂದಿರುವುದೇ ತಪ್ಪಾದರೆ ಅವರು ತಿದ್ದುಪಡಿಯನ್ನು ತಂದಿರುವುದೂ ತಪ್ಪಾಯಿತು.

ಶ್ರೀ ಟಿ. ಆರ್. ಶಾಮಣ್ಣ.—ಎರಡೂ ತಪ್ಪು. ಆದ್ದರಿಂದ ಅದನ್ನು ತೆಗೆದುಕೊಳ್ಳಬಾರದು ಎಂದು ಹೇಳುತ್ತಿದ್ದೇನೆ.

Mr. SPEAKER.—The question before the House is whether there should be a change in the name of the State as Kannada Nadu or as Karnatak.

ಶ್ರೀ ಟಿ. ಆರ್. ಶಾಮಣ್ಣ.—ಮೈಸೂರಿಗೆ 5 ಭಾಗಗಳು ಸೇರದಿದ್ದರೆ ಈ ರೀತಿ ಹೆಸರಿನ ಗೊಂದಲವುಂಟಾಗುತ್ತಿರಲಿಲ್ಲ, ಸೇರಿರುವುದರಿಂದ ಒಬ್ಬೊಬ್ಬರು ಒಂದೊಂದು ರೀತಿ ತಮಗೆ ತೋರಿದಂತೆ ದೇಶದ ಹೆಸರನ್ನು ಬದಲಾಯಿಸಬೇಕೆಂದು ಹೇಳುತ್ತಿದ್ದಾರೆ. ಮೈಸೂರಿಗೆ ಬೇರೆ ಭಾಗಗಳು ಸೇರಿದಾಗ ಒಂದು ಆಶ್ವಾಸನೆ ಕೊಟ್ಟಿದ್ದುದು ನನಗೆ ಜ್ಞಾಪಕವಿದೆ. ಮೈಸೂರಿನ ಗವರ್ನರನ್ನು ಬದಲಾಯಿಸುವುದಿಲ್ಲ, ಬೆಂಗಳೂರು ರಾಜಧಾನಿಯಾಗಿರುವುದನ್ನು ಬದಲಾಯಿಸುವುದಿಲ್ಲ ಮತ್ತು ಕರ್ಣಾಟಕ ಎಂದು ಬೇರೆ ಹೆಸರಿಡುವುದಕ್ಕೆ ಹೋಗುವುದಿಲ್ಲ ಎಂದು ಹೇಳಿದ್ದರು. ಮಾನ್ಯ ರೆಡ್ಡಿಯವರು ಮಾತನಾಡುತ್ತಾ ಸೇರ್ಪಡೆಯಾಗಲಿ, ಅಮೇಲೆ ಹೇಗೆ ಬೇಕಾದರೂ ಆಗಲಿ ಎಂದು ಸೇರಿಕೊಂಡೆವು ಎಂದು ಹೇಳಿದ್ದರು. ಒಂಟೆಯು ತನ್ನ ಮೂಗನ್ನು ತೂರಿಸುವುದಕ್ಕೆ ಅವಕಾಶ ಕೊಟ್ಟರೆ ಸಾಕೆಂದು ಹೇಳಿ ಆಮೇಲೆ ತನ್ನ ಇಡೀ ದೇಹವನ್ನು ತೂರಿಸಿದಂತೆ ಇದರ ಬಗ್ಗೆ ಕೂಡ ಆಗಿದೆ. ಸೇರುವಾಗ ಹೇಗಾದರೂ ಸೇರಿದರೆ ಸಾಕು ಎಂದು ಸೇರಿ ನಂತರ ಇದೆಲ್ಲಾ ನಡೆಯುತ್ತಿದೆ. ಈಗ ಹೆಸರನ್ನು ಬದಲಾವಣೆ ಮಾಡುವುದರಿಂದ ಏನು ಅನುಕೂಲವೆಂಬುದನ್ನು ಮೊದಲು ಸ್ಪಷ್ಟಪಡಿಸಬೇಕು. ನಂತರ ಮುಂದಿನ ವಿಚಾರ ಆಲೋಚನೆ ಮಾಡಬಹುದು. ಈಗ ಹಳೆಯ ಮೈಸೂರಿನ ಜನ ವ್ಯಥೆಪಡಬೇಕಾದ ಸಂದರ್ಭವಿದೆ. ಹೊಸ ಮೈಸೂರಾದ ಮೇಲೆ ಸಾಧಾರಣವಾಗಿ ಹಳೆಯ ಮೈಸೂರಿನವರು ನಿರ್ವೀರ್ಯರಾಗಿ ನಪುಂಸಕರಾದರು, ಇನ್ನು ಮುಂದೆ ಏನೇನಾಗುವುದೋ ಎಂದು ಹಳೆಯ ಮೈಸೂರಿನವರು ಗಾಬರಿಯಾಗಿದ್ದಾರೆ. ಯಾರು ಯಾರು ಮೈಸೂರನ್ನು ಕಟ್ಟುವುದಕ್ಕೆ ಪ್ರಯತ್ನ ಪಟ್ಟರೋ, ಯಾರು ಯಾರು ಸ್ವಾತಂತ್ರ್ಯ ತರುವುದಕ್ಕೆ ಪ್ರಯತ್ನಪಟ್ಟರೋ ಅವರನ್ನು ಮೂಲೆಗೆ ಕೂಡಿಸಿದ್ದಾರೆ. ಶ್ರೀ ಎಸ್. ಚನ್ನಯ್ಯನವರು ಇಲ್ಲದ್ದಾರೆ. ಅವರ ಪ್ರಭಾವ ಹಿಂದೆ ಎಷ್ಟಿತ್ತೋ ಅದನ್ನು ಮುರಿಯುವುದಕ್ಕೆ ಬಹಳವಾಗಿ ಪ್ರಯತ್ನ ಪಡುತ್ತಿದ್ದಾರೆ. ಇನ್ನೂ ಅನೇಕರನ್ನು ಮೂಲೆಗೆ ಕೂಡಿಸಲು ಪ್ರಯತ್ನ ನಡೆಯುತ್ತಿದೆ.

ಶ್ರೀ ಪಿ. ಎಂ. ನಾಡಗೌಡ.—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ನಿರ್ಣಯಕ್ಕೆ ಸಂಬಂಧವಿಲ್ಲದಿರುವ ವಿಚಾರವನ್ನು ಹೇಳುತ್ತಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಹಿನ್ನೆಲೆ ಹೇಳದಿದ್ದರೆ ಪ್ರಯೋಜನವಾಗುವುದಿಲ್ಲ, ಅದನ್ನು ಹೇಳಿ ಮುಂದಿನ ವಿಷಯದ ಮೇಲೆ ಮಾತನಾಡಬೇಕಾಗಿದೆ. ಶ್ರೀ ಚನ್ನಯ್ಯನವರು...

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಶ್ರೀ ಚನ್ನಯ್ಯನವರ ವಿಷಯದಲ್ಲಿ ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪುವುದಿಲ್ಲ. ಅವರು ದೊಡ್ಡವರು.

Mr. SPEAKER.—The question before the House is whether it should be Karnataka or Kannada Nadu.

ಶ್ರೀ ಟಿ. ಆರ್. ಶಾಮಣ್ಣ.—ಶ್ರೀ ಚನ್ನಯ್ಯನವರು ದೇಶವನ್ನು ಕಟ್ಟಲು ಬಹಳವಾಗಿ ಶ್ರಮಿಸಿರುವುದರಿಂದ ಅವರ ಹೆಸರನ್ನು ಹೇಳಬೇಕಾಗಿದೆ.

Mr. SPEAKER.—Hon'ble Member may avoid personal references.

Sri D. DEVARAJ URS.—In this particular context why should the Chair restrict, Sir? We may have to refer to various people who have played some notable part in the formation of the State. If some names are mentioned, I do not think there can be any objection.

Mr. SPEAKER.—Reference to personalities might create unnecessary bitterness and embarrassment and it does not conduce to the dignity or decorum of the House. The debate should proceed on grounds of principles and public policies, not with reference to any names.

Sri D. DEVARAJ URS.—I would like to subuit to the Hon'ble Chair. The Speaker has the right to conduct the debate in a manner which would fit in with the Rules of Procedure. But so far as mentioning of names are concerned, there are some names of leaders who have been in one way or the other connected with in re-organisation of State and I do not think we are doing any injustice or speaking in a tone derogatory to these persons, if we merely refer to their names.

Mr. SPEAKER.—I can understand names being mentioned in a general way. But here reference was made to the hon. Member Sri Channiah and that was of a personal nature. I do not know to what extent it was correct. It is said attempts are made to suppress him. I think it is very bad reference. Some members may say it is not a fact. Such references are undesirable. If Sri Channiah himself wants to express, I have no objection. In the interest of dignity and decorum of the House and of the Members, Hon. Members may avoid personal references. Members who are present on the floor of the House, can argue their case very well. Hon. Member may speak about principles, policies and history—everything. But to say that a particular person is coming to power or he is suppressed will not contribute to dignity of the House. Such references may be avoided.

Sri H. M. CHANNABASAPPA.—References will be made because at the the time of unification of the different parts of Karnataka, so many discussions have taken places, so many people have in different capacities held out assurances. Many of them are public leaders and their utterances will have to be quoted. The context will have to be stated. It is not easy to dissociate ourselves from the men who count in these matters. Therefore it may be desirable not to mention names and make personal references, but certain necessary references will have to be made and it cannot be ruled out.

Mr. SPEAKER.—Probably the hon. Members have not understood me or probably I have not expressed myself in clear terms. My idia is hon. members may refer to opinions expressed from time to time, or refer

to the understanding or undertaking given at the time of formation of the new State of Mysore. But to say that an attempt is made to suppress a person and a particular person will suffer—such references are unfair. These are too personal. I have no objection if the hon. Member make reference to opinion and promises made from time to time by individuals. Let it not be said that because a new State has been formed, so and so lost his popularity and some others are coming to power. That becomes a matter which is likely to lead to many troubles here. Besides it is irrelevant. I can understand the views and opinions expressed by Sri H. M. Channabasappa and Sri Devaraj Urs. But references of a personal nature should be avoided.

ಶ್ರೀ ಟಿ. ಆರ್. ಶಾಮಣ್ಣ.—ಕೆಲವು ವ್ಯಕ್ತಿಗಳು ನಮ್ಮ ರಾಜ್ಯವನ್ನು ಕಟ್ಟಿಬೆಳೆಸಲು ಶ್ರಮಿಸಿರುವುದರಿಂದ ಅವರ ಹೆಸರುಗಳನ್ನು ಕೆಲವು ಸಂದರ್ಭಗಳಲ್ಲಿ ಹೇಳಬೇಕಾಗುತ್ತದೆ.

Mr. SPEAKER.—I regret that Rules will not permit mentioning of names. Any State or Nation is greater than personalities. The fate of a nation or State does not depend upon one man or two. it is a collective personality. Supposing some persons speak about the hon. Member A and some others want to speak about the hon. Member B, then it will become a sort of conflict of persons and personalites and the debate will degenerate. The Rules as I understand them, do not permit this. Therefore I said references to promises by anybody may be referred to. But references to personalities and personal affairs should not be referred to. That should be taken as my ruling.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮ್ರತೆಯಿಂದ ಒಂದು ಮಾತನ್ನು ಹೇಳಬೇಕಾಗುತ್ತದೆ. ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಇಂಡಿಯಾ ದೇಶದಲ್ಲಿ ಅನೇಕ ವ್ಯಕ್ತಿಗಳ ಜೀವನ ಈ ರಾಷ್ಟ್ರ ಜೀವನದ ಹೋರಾಟದ ಜೊತೆಯಲ್ಲಿ ಹಾಸು ಹೊಕ್ಕಾಗಿ ಹೊಂದಿಕೊಂಡು ಹೋಗಿದೆ. ಅವರ ಅಭಿಪ್ರಾಯಗಳನ್ನು ಅವರ ವ್ಯಕ್ತಿತ್ವವನ್ನು ಬಿಟ್ಟು ಮಾತನಾಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಇಂತಹ ಪ್ರಾಮುಖ್ಯವಾದ ವಿಷಯಗಳಲ್ಲಿ ಅದನ್ನು ಹೇಳಿದರೆ ಅಪಕೃತವಾಗುವುದಿಲ್ಲ, ಅವರ ಅಭಿಪ್ರಾಯಗಳು ಅವರ ವ್ಯಕ್ತಿತ್ವದ ಬಗ್ಗೆ ಕೆಲವನ್ನು ಹೇಳಿಯೇ ಹೇಳಬೇಕಾಗುತ್ತದೆ. ಇಂಡಿಯಾ ದೇಶದ ಚರಿತ್ರೆಯ ವಿಷಯದಲ್ಲಿ, ಹೋರಾಟದ ವಿಷಯದಲ್ಲಿ ಅದರಲ್ಲೂ ಈ 20 ವರ್ಷಗಳ ಅವಧಿಯಲ್ಲಿ ಶ್ರೀಮಾನ್ ಜವಹರಲಾಲ್ ನೆಹರೂರವರ ವಿಷಯವನ್ನು ಅನೇಕ ಸಾರಿ ಹೇಳಬೇಕಾಗುತ್ತದೆ ಅದನ್ನು ಹೇಳಬಾರದು ಎಂದರೆ ಕಷ್ಟವಾಗುತ್ತದೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ಹೆಸರುಗಳನ್ನು ಹೇಳುವುದು ಅವರ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

Mr. SPEAKER.—Hon. Member Sri Huchmasthy Gowda probably has not understood me properly : I said, I have no objection to the citing of opinions of others. Pandit Jawaharlal himself has stated several times that he is a humble servant of the nation and the nation is greater than himself or all things put together, irrespective of the greatness and stature of the persons constituting it. I have already stated that there is no objection to quote the views of persons who were associated with the movement and who were against it. But nobody should dwell on the personal aspect of their lives and say that a certain event would diminish or save the greatness of a particular individual. A Member could say that so and so made a promise at a particular time, expressed a particular opinion, and participated in a movement. Such references of impersonal nature will be permitted. Personal references should be avoided.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಮ್ಮ ನಾಡಿನ ವಿಷಯದಬಗ್ಗೆ ಯಾವ್ಯಾವ ಲೀಡರ್ಸ್ ಏನೇನು ಮಾಡಿದರು ಯಾವ ಯಾವ ನಿರ್ಣಯಗಳನ್ನು ಪಾಸ್ ಮಾಡಿದರು ಎಂಬುದನ್ನು ಹೇಳುವುದಕ್ಕೆ ಅಡ್ಡಿ ಇಲ್ಲ. ಆಗ ಅವರ ಅಭಿಪ್ರಾಯಗಳಿಗೆ ಒಂದು ಪ್ರಭಾವ ಇತ್ತು ಈಗ ಕಡಿಮೆಯಾಗಿದೆ. ಹಿಂದೆ ಅವರು ಜೀವಂತವಾಗಿದ್ದರು ಈಗ ಇಲ್ಲ. ಅಂತಹವರ ಹೆಸರುಗಳನ್ನು ಕೆಲವು ಸಂದರ್ಭಗಳಲ್ಲಿ ಹೇಳಬೇಕಾಗುತ್ತದೆ. ಆದರೂ ಕೂಡ ಹಾಗೆ ಹೇಳುವಾಗ ಮನಸ್ಸಿಗೆ ನೋವಾಗುವಂತಹ ಕಹಿ ಪ್ರಸಂಗಗಳಿಗೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

Mr. SPEAKER.—That is exactly what I have stated. Personal references should be avoided but opinions of personages may be quoted.

ಶ್ರೀ ಟಿ. ಆರ್. ಶಾಮಣ್ಣ.—ಹೆಸರುಗಳನ್ನು ಹೇಳಬೇಕೆಂದೇನೂ ನನಗೆ ಇಷ್ಟವಿಲ್ಲ, ವಿಶಾಲ ಮೈಸೂರು ಆದಾಗ............

Sri L. SRIKANTAIAH.—I rise on a point of order. I draw attention of the Chair to sub-rule (2) of Rule 281. Now the Chair has ordered that the amendment to the Resolution could also be discussed. I would like to point out that according to the rule quoted by me, no amendment shall be moved which has merely the effect of a negative vote. So the amendment is not in order and it cannot be discussed even if it is contended that permission has been accorded and the matter is already under discussion; we cannot overcome the provisions of the rule laid down by this House. When an illegal act has been done, the law of estoppel does not stop operating. The amendment should be ruled out.

Mr. SPEAKER.—The hon. Member Sri Srikantaiah has raised a point of order under Rule 281(2) that the Amendment is of a negative type, that it should not have been allowed and even if it is allowed, a wrong act cannot become a right act. If I have understood him properly, that is what he said. Sub-rule (2) of Rule 281 reads thus:

> "An amendment shall not be moved which has merely the effect of a negative vote."

As I interpreted, the whole amendment is not of a negative type.

Sri H. M. CHANNABASAPPA.—When I raised a point of order some time ago, the Chair was pleased to observe that it is not admissible under the Rules. You were pleased to say that you would give a ruling on it tomorrow. But now you are giving a ruling on the same objection raised by another Member.

Mr. SPEAKER.—Even before the hon. member raised, this point some other hon. Member had raised that objection earlier and I have stated that it is not an amendment of a negative nature. When somebody raised an objection, it was perfectly within my right to give a ruling and I gave a ruling. When hon. Member Sri Channabasappa raised his objection, I replied that I shall bear in mind his objection and consider whether I should revise my earlier ruling. In the meanwhile, Sri Srikantaiah raised a point of order.

Sri H. M. CHANNABASAPPA.—The point of order raised by me and the point of order raised by Sri Srikantiah are the same. The Amendment annuls the Resolution; it takes away the very essence of the Resolution; it has got the effect of a negative vote. Therefore, it

cannot be admitted. But you state that it has already been admitted. I state a wrong thing cannot become a right thing by mere admission. Moreover, you were pleased to observe that you would give a ruling tomorrow.

Mr. SPEAKER.—I might have stated like that but that does not prevent me from giving a ruling to-day.

Sri H. M. CHANNABASAPPA.—The Chair is all-powerful. It can do anything it wants. But I want you to keep up your own words.

Mr. SPEAKER.—If the hon. member has anything more to say in respect of his point that the amendment has the effect of a negative vote he may state that within a short time how it has the effect of negative vote.

Sri H. M. CHANNABASAPPA.—Sri Srikantaiah's Resolution is like this:

> " That this Assembly is of opinion that a recommendation be made to the Government of India to take necessary steps to change the present name of the Mysore State as 'Kannada Nadu'."

The Amendment seeks to replace the words "Kannada Nadu" in the Resolution by the word "Karnataka". Therefore, the very purpose of the Resolution. namely, that this State should be called "Kannada Nadu" is defeated. If this amendment is to be accepted as in order, it has the effect of a negative nature, reversing the principle of the Resolution. Since the effect of the amendment is to negative the Resolution, it is not in order and, therefore a well-considered ruling has to be given. The ruling given at present has far-reaching consequences.

Sri L. SRIKANTIAH.—One word more Sir. Hon. Member Sri B. P. Gangadhar has, in his amendment, to my Resolution proposed the substitution of the word "Karnataka" for the words "Kannada Nadu". He can as well bring a substantive motion that the State be named "Karnataka". Or, in the alternative, he is at liberty to oppose the entire Resolution. Instead of adopting any of these two courses, what he has done is, he has brought an amendment seeking to substitute the word "Karnataka" for "Kannada Nadu" in the Resolution. That is the pith and substance of the entire argument here. Now a substantive resolution is a positive one. By admitting this, the very substantive motion before the House, is going to be debated. That cannot be done by means of an amendment. My learned friend Sri B. P. Gangadhar is at liberty to bring in an independent resolution. If he bring it, nobody can prevent him. Let him have the ballot. If the Chair now were to say that it has already been moved and we can do nothing about it, it would mean that a wrong cannot be set right. No ruling can override the rules. I submit the amendment proposed to be moved offends primarily rule 284 and should be ruled out of order.

6-00 P.M.

Sri N. A. CHANNE GOWDA (Pandavapura).—Sir, it is already 6 O' Clock and the House is sitting from 12 NOON, without a break.

MR. SPEAKER.—I extend the time by about 10 minutes. I will hear Sri Krishnan and I will give my ruling on Monday.

SRI M. S. KRISHNAN.—I shall read rule 281 (2):

> "An amendment shall not be moved which has merely the effect of a negative vote."

We have to very clearly read the words "effect of a negative vote." To the resolution moved if I have included the words "this shall not be done" or "this must not be done", then it has the effect of a negative vote. The amendment brought forward by Sri B. P. Gangadhar and Sri T. R. Shamanna are quite different. There is no such thing as "shall not be done." Sri B. P. Gangadhar suggests that for the word "Kannada Nadu" the word "Karnataka" shall be substituted and Sri Shamanna suggests that for the word "Kannadanadu" the word "Mysore" shall be substituted. So, it cannot be considered as being negative. On the other hand it is an improvement over the resolution brought forward by Sri Srikantaiah. In the circumstances I wish to state that it has not got a negative force but it is an improvement over the resolution.

The second submission is, rule 284 says:

> " The Speaker may put amendments in such order as he may think fit:
>
> Provided that the Speaker may refuse to put an amendment which in his opinion is frivolous."

The Speaker in his wisdom has deliberated over the point and he has found that the amendments of both Sri B. P. Gangadhar and Sri Shamanna are not frivolous. He has also allowed them to move the amendment. It would not be correct on the part of the learned Professor to say that it is not in order. When they have already moved the motion, I think it is too late to say that they should not have moved the motion. I request you to overrule the objections raised by Sri Srikantaiah.

SRI T. R. SHAMANNA.—Immediately after the amendment was just read I raised objection and you said the question had to be considered deeply and a correct decision has to be taken.

MR. SPEAKER.—I have heard the hon. members. I shall give my ruling on this point on the next non-official day. On that day after the ruling is given Sri Shamanna will speak for the unexpired portion of the time allotted to him, *i.e.*, 5 minutes.

Now, the House will adjourn and meet on Monday, the 20th January 1969 at 12 NOON.

The House adjourned at Six Minutes past Six of the Clock to meet again at Twelve Noon on Monday, the 20th January 1969.

WD 11852 - GPB - 600—14-2-1969